ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಈ ವಿಷಯದ ಮೇಲೆ ಚರ್ಚೆ ಮಾಡಿದ ಮೇಲೆ ಇದಕ್ಕೆ ಒಂದು ನಿರ್ಣಯ ಮಾಡುವುದು ಅಗತ್ಯ ಎಂದು ಕೆಲವು ಮಾನ್ಯಸದಸ್ಯರ ಅಭಿಪ್ರಾಯ ವಾಗಿದೆ. ಆದಕಾರಣ ಮಾನ್ಯ ಸದಸ್ಯರೆಲ್ಲರೂ ಒಪ್ಪುವುದಾದರೆ ಒಂದು ನಿರ್ಣಯ ಅಂಗೀಕಾರ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಆ ರೀತಿ ಮಾಡುವುದು ಒಳ್ಳೆಯದು.

SRI H. D. DEVE GOWDA.—Hon.Madam Speaker, with your kind permission, I would like to move the following Resolution for the approvel of the House :

> "This House approves of the stand taken by the Advocate General for the State of Karnataka in withdrawing from the further proceedings of the Krishna Water Tribunal's attitude betrays partiality."

MADAM SPEAKAR.—I think the House agrees unanimously. The question is : This house approves of the stand latter by the Advocate General for the State of Karnataka in withdrowing from further proceeding of the Krishna Water Tribunal on the ground that the Tribunal's attitude betrays partiality.

The House unanimously adopted the Resolution.

DISCUSSION ON THE SUPPLEMENTARY ESTIMATES FOR 1974-75 DEMANDS FOR GRANTS.

SRI H. M. CHANNABASAPPA (Minister for Public Works and Electricity) —Madam Speaker, on behalf of the Minister for Finance, on the recommendation of the Governor, I beg to move :

"1. That a further sum not exceeding Rs. 200 be granted to Government to defray the charges which will come in course of payment during the year ending the 31st day of March, 1975, in respect of 'Police' ".

MADAM SPEAKAR.—Motion moved :

> "That a further sum not exceeding Rs. 200 be granted to Government to defray the charges which will come in course of payment during the year ending the 31st day of March, 1975 in respect of 'Police'."

The other Demads are also deemed to have been moved. Now, all the Demands are before the House for discussion.

12-30 P.M.

† ಶ್ರೀ ಎಸ್. ಬಂಗಾರಪ್ಪ...—ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಸದನದ ಒಪ್ಪಿಗೆಗಾಗಿ ಮಂಡಿಸಿರುವ ತಕ್ಕ ೧೯೭೪-೭೫ನೇ ಸಾಲಿನ ಹೆಚ್ಚುವರಿ ಬೇಡಿಕೆಗಳನ್ನು ವಿರೋಧಿಸಿ ಮಾತನಾಡಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ ಒಟ್ಟು ಈ ಬೇಡಿಕೆಗಳಲ್ಲಿ ೨೩೭೧ ಲಕ್ಷದ ೨೫ ಸಾವಿರ ರೂಪಾಯಿಗಳು ಈ ಹಣವನ್ನು ಪ್ರಸ್ತುತ ವರ್ಷದಲ್ಲಿ ಖರ್ಚು ಮಾಡುವುದಕೋಸ್ಕರ ಒಪ್ಪಿಗೆಗೆ ಕೇಳುತ್ತಿದ್ದಾರೆ ಇದರಲ್ಲಿ ಅವರೇ ಪ್ರಸ್ತಾವನೆಯಲ್ಲಿ ತಿಳಿಸಿರುವ ಹಾಗೆ ೧೩೨ ಲಕ್ಷದ ೬೬ ಸಾವಿರ ರೂಪಾಯಿಗಳು ಕೇಂದ್ರ ಸರ್ಕಾರದವರಿಂದ ಸಹಾಯಧನವಾಗಿ ಬರುತ್ತಿದೆ ಎನ್ನುವ ಅಂಶ. ೧೫೦ ಲಕ್ಷ ರೂಪಾಯಿಗಳು ಬೈವೇ ಆಫ್ ರಿಕವರಿ ಆಫ್ ಲೋನ್ಸ್ ಹಣ ಹಿಂದಕ್ಕೆ ಪಡೆಯತಕ್ಕದ್ದವರಿಂದ ಬರುತ್ತಿದೆ ಎನ್ನುವ ಅಂಶವನ್ನು ತಿಳಿಸಿದ್ದಾರೆ. ಹಾಗೆಯೇ ೧೦೯ ಲಕ್ಷ ರೂಪಾಯಿಗಳು ಆದರೆ ರಿಸೀಟ್ಸ್ ಮತ್ತು ೧೫೬೦ ಲಕ್ಷದ ೭ ಸಾವಿರ ರೂಪಾಯಿಗಳು ತ್ರೂ ಆಕೌಂಟೀಗ್ ಅಡ್ಜಸ್ಟ್‌ಮೆಂಟ್ಸ್ ಎನ್ನತಕ್ಕ ಡೀಟೈಲ್ ಕೊಟ್ಟು ಅನಂತರ ಜನರಲ್ ರಿವಿನ್ಯೂ ನಿಂದ ೧೯,೫೨,೦೦೦ ರೂಪಾಯಿಗಳು ನಮಗೆ ಖರ್ಚಾಗುತ್ತವೆ ಮತ್ತು ೧೫೭೧ ಲಕ್ಷ ರೂಪಾಯಿಗಳು ಎಕಾನಮಿ ಮೇಜರ್ಸ್‌ನಿಂದ ಉಳಿಸುತ್ತೇವೆ ಎನ್ನತಕ್ಕ ಅಂಶಗಳನ್ನು ತಿಳಿಸುತ್ತಾ ಅಲ್ಲಿಗೆ ನಿವ್ವಳವಾಗಿ ೧೯ ಲಕ್ಷದ ೫೨ ಸಾವಿರ ರೂಪಾಯಿಗಳು ಮಾತ್ರ ನಮಗೆ ಔಟ್ ಆಫ್ ಸೇವಿಂಗ್ಸ್‌ನಿಂದ ಖರ್ಚಾಗುತ್ತದೆ ಎನ್ನುವ ಮಾತನ್ನು ತಿಳಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾವು ಆಯವ್ಯಯ ಪತ್ರದ ಮೇಲೆ ಮಾತನಾಡಿದಾಗ ಹಲವಾರು ಸಲಹೆಗಳನ್ನು ಈ ಸದನದಲ್ಲಿ ಕೊಟ್ಟಿದ್ದೇವೆ. ಈ ಸದನದಲ್ಲಿ ಸುಮಾರಾಗಿ ಇನ್ನೂರು ಮತ್ತು ನಿನ್ನೆಯೂ ಕೂಡ ಒಂದು ವಿಷಯ ಪ್ರಸ್ತಾಪಕ್ಕೆ ಬಂತು. ಅದು ಯಾವುದು ಎಂದರೆ ಈ ಆರ್ಥಿಕ ಮುಗ್ಗಟ್ಟನ್ನು ನಾವು ಏನು ಎದುರಿಸುತ್ತಿದ್ದೇವೆ ಅದಕ್ಕೆ ಸಂಬಂಧಪಟ್ಟಹಾಗೆ ರಾಜ್ಯದ ಎಲ್ಲಾ ಇಲಾಖೆಗಳಿಗೂ ಕೊಟ್ಟ ಆಜ್ಞೆಯನ್ನು ಸಭೆಯ ಮುಂದೆ ಇಡಬೇಕು ಎನ್ನತಕ್ಕ ವಿಷಯ ಪ್ರಸ್ತಾಪ ಮಾಡಿದ್ದಾಗಿದೆ, ಮತ್ತು ಒತ್ತಾಯವನ್ನೂ ಮಾಡಿದ್ದೂ ಆಗಿದೆ. ಹಣಕಾಸಿನ ದುಸ್ಥಿತಿಯನ್ನು ಸರಿಪಡಿಸತಕ್ಕ ಹಲವಾರು ಕ್ರಮಗಳಲ್ಲಿ ನಾವು ಇಲಾಖೆಗಳಲ್ಲಿ ಖರ್ಚಾಗಿರತಕ್ಕ ಹಣ ಏನಿದೆ ಅದರಲ್ಲಿ ಕಡಿತ ಮಾಡಲೇ ಬೇಕಾದಂಥ ಸಂದರ್ಭವನ್ನು ನಾವು ಸೃಷ್ಟಿಸಿ ಆದೇಶಗಳನ್ನು ಎಲ್ಲಾ ಇಲಾಖೆಗಳಿಗೆ ಕಳುಹಿಸಿದ್ದೇವು ಮತ್ತು ಆದರಲ್ಲಿ ನೀವೇ ಹೇಳಿರುವಹಾಗೆ ಸೇವಿಂಗ್ಸ್‌ನಿಂದ, ಎಕಾನಮಿ ಮೇಜರ್ಸ್‌ನಿಂದ ನಮಗೆ ಸಿಕ್ಕತಕ್ಕಂಥ ಹಣ ೧೫೭೧ ಲಕ್ಷ ರೂಪಾಯಿಗಳು. ಪ್ರಾಮುಖ್ಯವಾಗಿ ಎರಡು ಇಲಾಖೆಗಳ ಬಗ್ಗೆ ಹಣ ಬೇಕು ಎಲ್ಲಾ ಇಲಾಖೆಗಳಿಗೂ ಹಣ ಬೇಕಾಗುತ್ತದೆ ಇಲ್ಲ ಎಂದು ಅಲ್ಲ. ಹಣವನ್ನು ಎಲ್ಲಾ ಇಲಾಖೆಗಳಿಗೂ ಕೊಡತಕ್ಕ ಶಕ್ತಿ ಪಡೆದಿಲ್ಲ, ಜನತೆ ಕೇಳುವಷ್ಟು ಕೊಡಲು ಆಗುವುದಿಲ್ಲ ಎನ್ನುವ ಅಂಶವನ್ನು ಹೇಳಿದ್ದೀರಿ. ನಾನು ಎರಡು ವಿಷಯಗಳನ್ನು ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ವಿದ್ಯಾ ಇಲಾಖೆಯಲ್ಲಿ ಈಗಾಗಲೇ ಮಂತ್ರಿಮಂಡಲ ಒಂದು ತೀರ್ಮಾನ ಮಾಡಿದೆ ಎಂದು ಕೆಲವು ದಿವಸಗಳ ಹಿಂದೆ ಪತ್ರಿಕೆಯಲ್ಲಿ ಓದಿದೆ. ಪ್ರಾಥಮಿಕ ಶಾಲೆಗಳು ಏನು ಇವೆ, ಆ ಶಾಲೆಗಳಲ್ಲಿ ಇರತಕ್ಕ ಮಕ್ಕಳ ಸಂಖ್ಯೆಗನುಗುಣವಾಗಿ ವಿದ್ಯೆಯನ್ನು ಹೇಳಿಕೊಡತಕ್ಕ ಒಂದು ಉಪಾಧ್ಯಾಯ ವರ್ಗ ಇರಬೇಕು ಎಂದು. ಹಲವಾರು ಸಾರಿ ವಿದ್ಯಾ ಇಲಾಖೆಯ ಬಗ್ಗೆ ಮಾತನಾಡುವಾಗ ನಾವು ಅಭಿಪ್ರಾಯವನ್ನು ಕೊಟ್ಟಿದ್ದೇವೆ. ಈ ಸಾರಿ ಸುಮಾರು ೨೦೦೦ ಉಪಾಧ್ಯಾಯರುಗಳು ಇನ್ನೂ ಕೂಟ ರಾಜ್ಯಕ್ಕೆ ಬೇಕು ಅನ್ನತಕ್ಕಂಥ ಅಂಶವನ್ನು ಮನಗಂಡು ಮಂತ್ರಿಮಂಡಲ ಈ ಎಕಾನಮಿ ಮೇಜರ್ಸ್‌ನಿಂದ ಉಪಾಧ್ಯಾಯರ ನೇಮಕ ಪ್ರೈಮರಿ ಎಜುಕೇಷನ್, ಪ್ರಾಥಮಿಕ ಶಿಕ್ಷಣಕ್ಕೆ ತೊಂದರೆ ಬರಬಾರದು, ಉಪಾಧ್ಯಾಯರ ನೇಮಕ ಆಗಬೇಕೆಂದು ಸರ್ಕಾರದವರೇ ಒಪ್ಪಿದ್ದಾರೆ ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ೨೦೦೦ ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಸಿದ್ಧವಾಗಿದೆಯೇ ಎಂಬುದನ್ನು ತಮ್ಮ ಹತ್ತಿರದಲ್ಲಿ ತಿಳಿಸಬೇಕು, ಅದು ನಿಜವೇ ? ಹಣವನ್ನು ಹಾಗೆ ಕಡಿತ ಮಾಡದೆ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಉಪಾಧ್ಯಾಯರ ನೇಮಕವನ್ನು ಸಂಪೂರ್ಣವಾಗಿ ಯಾವುದೂ ಬೋತಾ ಮಾಡದಹಾಗೆ ಮಾಡುತ್ತಾರೆಯೇ ಎಂಬುದನ್ನು ತಿಳಿಸಬೇಕು. ಹಲವಾರು ಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲ. ಶಿಕ್ಷಣಕ್ಕೆ ತೊಂದರೆಯಾಗುತ್ತಿದೆ ಎನ್ನುವ ಅಂಶವನ್ನು ಕೇಳುತ್ತಿದ್ದೇವೆ. ಅದಕ್ಕೆ ಡಿ.ಡಿ.ಪಿ.ಐ ಅವರನ್ನು ಕೇಳಿದರೆ ಅವರು ನಮಗೆ ಹಣದ ತೊಂದರೆ ಇದೆ. ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಆಗಲ್ಲ ಎನ್ನುವ ಅಂಶವನ್ನು ತಿಳಿಸಿದ್ದಾರೆ. ಹಣದ ಕೊರತೆಯಿಂದ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟ ಉಪಾಧ್ಯಾಯರ ನೇಮಕದಲ್ಲಿ ಕಡಿತವನ್ನು ಮಾಡಿದ್ದಾರೆಯೇ, ಹಾಗೇನಾದರೂ ಮಾಡಿದ್ದರೆ ಎಷ್ಟರಮಟ್ಟಿಗೆ ಮಾಡಿದ್ದಾರೆ. ಏತಕ್ಕೆ ಮಾಡಿದ್ದಾರೆ. ಇದರಿಂದ ಮೂಲ ಶಿಕ್ಷಣಕ್ಕೆ ತೊಂದರೆಯಾಗುವುದಿಲ್ಲವೇ ಎನ್ನತಕ್ಕ ಅಂಶಗಳನ್ನು ದಯಮಾಡಿ ತಮ್ಮ ಉತ್ತರದಲ್ಲಿ ತಿಳಿಸಬೇಕು. ಹಾಗೆಯೇ ಇನ್ನೂ ಒಂದು ಅಂಶ ಏನೆಂದರೆ ಇವತ್ತು ಎಕಾನಮಿ ಮೇಜರ್ಸ್ ಹಸರಿನಲ್ಲಿ ತಾವು ೧೫೭೧ ಲಕ್ಷ ರೂಪಾಯಿಗಳನ್ನು ಉಳಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಹಣಕಾಸಿನ ಪರಿಸ್ಥಿತಿಯಿಂದ ಅಗತ್ಯವಾಗಿ ಮಾಡಬೇಕಾದಂಥ ಖರ್ಚ ಬಿಟ್ಟು, ಬೇರೆ ಖರ್ಚುಗಳನ್ನು ಸಲ್ಲಿಸಬೇಕು ಎನ್ನುವ ಒಂದು ಅಭಿಪ್ರಾಯವನ್ನು ನಾವು ಒಪ್ಪಬೇಕಾಗುತ್ತದೆ. ಮಾನ್ಯ ಪುಟ್ಟಸ್ವಾಮಯ್ಯನವರು ಏನು ಒತ್ತಾಯ

(ಶ್ರೀ ಎಸ್. ಬಂಗಾರಪ್ಪ)

ಪಡಿಸಿದ್ದಾರೆ ಅದೇ ಅಭಿಪ್ರಾಯವನ್ನೂ ನಾನು ಒಪ್ಪುತೇನೆ. ಇವತ್ತು ನಿರ್ದೇಶ ಕಳಿಸಿದ ಮೇಲೆ ಎಲ್ಲಾ ಇಲಾಖೆಯವರು ಅದನ್ನು ಪರಿಪಾಲನೆ ಮಾಡಲೇಬೆಕು ಯಾವ ಯಾವ ಇಲಾಖೆಗಳಿಗೆ ನಿರ್ದೇಶನ ಕಳಿಸಿರುತ್ತಾರೆಯೋ ಅವರು ಪರಿಪಾಲನೆ ಮಾಡಬೇಕು. ಹಾಗೆ ಮಾಡದೆ ಒಂದೇ ಇಲಾಖೆ ಪರಿಪಾಲನೆ ಮಾಡಿ ಮತ್ತೊಂದು ಇಲಾಖೆ ಪರಿಪಾಲನೆ ಮಾಡಿದ್ದರೆ ಏನಾಗುತ್ತದೆ. ಎಂದರೆ ಕೆಲವು ಇಲಾಖೆಗಳಿಗೆ ಎಕಾನಮಿ ಮೇಜರ್ ಅನ್ವಯವಾಗುತ್ತದೆ, ಬೇರೆ ಇಲಾಖೆಗಳಿಗೆ ಅನ್ವಯವಾಗುವುದಿಲ್ಲ ಎಂಬ ಅಭಿಪ್ರಾಯ ಬರುತ್ತದೆ. ವರ್ಗವರ್ಗಿ ನಿಲ್ಲಿಸಿದ್ದನ್ನು ನಾನು ಸಂತೋಷದಿಂದ ಸ್ವಾಗತ ಮಾಡುತ್ತೇನೆ ಅದರಿಂದ ಟಿ.ಎ.ಡಿ.ಎ ಲಕ್ಷಗಟ್ಟಲೆ ಉಳಿಯುತ್ತದೆ. ಜೊತೆಗೆ ಸರ್ಕಾರದ ತಲೆತೋವು ಕೂಡ ಕಡಿಮೆ ಮಾಡಿದೆ. ಈ ನೀತಿಯನ್ನು ಒಪ್ಪಿದರೂ ಕೊಡ ತಾವು ಟಿ.ಎ. ಕೊಡತಕ್ಕ ದೃಷ್ಟಿಯಿಂದ ನಿಲ್ಲಿಸಿಬಿಟ್ಟಿದ್ದೀರಿ ಎನ್ನತಕ್ಕ ಮಾತನ್ನು ಹೇಳಿದ್ದರೂ ಕೂಡ ಹಲವಾರು ಇಲಾಖೆಯಲ್ಲಿ ಮತ್ತೆ ಇದೇ ಟ್ರಾನ್ಸ್‌ಫರ್‌ಗಳು ನಡೆದಿದೆ. ಯಾವ ಇಲಾಖೆಗೆ ಸಂಬಂಧಪಟ್ಟ ಹಾಗೆ ನಿರ್ದೇಶನ ಕೊಟ್ಟಿದ್ದಾರೋ. ಯಾವ ಇಲಾಖೆಗೆ ಎಕಾನಮಿ ಮೇಜರ್ಸ್ ಅನ್ವಯ ಆಗುತ್ತದೆಯೋ ಆ ಇಲಾಖೆಗೆ ಸಂಬಂಧಪಟ್ಟಹಾಗೆ ವರ್ಗವರ್ಗಿ ನಡೆದಿವೆ. ಸರ್ಕಾರ ದವತಿಂ ಏನು ಆಜ್ಞೆಯನ್ನು ಹೊರಟಿದ್ದೀರೋ ಆ ಆಜ್ಞೆಗೆ ವಿರುದ್ಧವಾಗಿ ನಡವಳಿಕೆ ಮಾಡಿದರೆ ಅದು ಆಜ್ಞೆಗೆ ವಿರೋಧ ಆಗುವುದಿಲ್ಲವೇ ಎಂದು ಈ ಸಮಯದಲ್ಲಿ ಕೇಳಬೇಕಾಗಿದೆ. ಅದಕೋಸ್ಕರವಾಗಿ ಎಕಾನಮಿ ಮೇಜರ್ಸ್ ಪದ ಏನು ಇದೆ ಅದರ ಸಂಪೂರ್ಣ ಅರ್ಥ ವನ್ನು ಜಾರಿಗೆ ಕೊಡತಕ್ಕ ಪರಿಸ್ಥಿತಿ ಇರಬೇಕು, ಇಲ್ಲದಿದ್ದರೆ ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ ಎಂಬ ನಮೂನೆಯಲ್ಲಿ ಮಾಡಿದಂತಾಗುತ್ತದೆ. ಹಣವನ್ನು ತಾವು ಉಳಿಸತಕ್ಕ ಅಭಿಪ್ರಾಯ ಇದ್ದು ಏನು ಎಕಾನಮಿ ಮೇಜರ್ಸ್ ತಂದಿರುತ್ತೀರೋ ಅದರ ತದ್ವಿರುದ್ಧ ನಡೆದುಕೊಂಡ ಹಾಗೆ ಅಭಿ ಪ್ರಾಯ ಬರುತ್ತದೆ. ಇಂತಹ ಪ್ರಕರಣಗಳು ಬೇಕಾದಷ್ಟು ಇವೆ ಜೊತೆಗೆ ಎಕಾನಮಿ ಮೇಜರ್ಸ್‌ನಿಂದ ಅತ್ಯಗತ್ಯವಾಗಿ ಆಗಬೇಕಾದಂಥ ಕೆಲಸಕಾರ್ಯಗಳು ಸ್ಥಗಿತವಾಗಿದೆ.

ಎಕಾನಮಿ ಮೆಶರ್ಸ್ ಹೆಸರಿನಲ್ಲಿ ಅತ್ಯಗತ್ಯವಾಗಿ ಆಗಬೇಕಾದ ಕೆಲಸಗಳು ಆಗುತ್ತಾ ಇಲ್ಲ. ಎಕಾನಮಿ ಮೆಸರ್ಸ್ ಬಗ್ಗೆ ಪತ್ರಿಕೆಯಲ್ಲಿ ಓದಿದೆ. ಎಕಾನಮಿ ಮೆಶರ್ಸ್ ಆಸ್ಪತ್ರೆ ಅಪಾಯಿಂಟ್‌ಮೆಂಟ್ಸ್ ಮತ್ತು ಆರೋಗ್ಯ ಇಲಾಖೆಗೆ ಅನ್ವಯಿಸುವುದಿಲ್ಲವೆಂದು ಇದೆ. ಆರೋಗ್ಯ ಸಚಿವರು ಹಣ ಇಲ್ಲ ತೊಂದರೆ ಯಾಗಿದೆ, ಎಕಾನಮಿ ಮೆಶರ್ಸ್ ಹಾಕಿದಾರೆ ಎನ್ನುವ ಅಭಿಪ್ರಾಯವನ್ನು ಕೊಟ್ಟರೆ, ಮಾನ್ಯ ಅರ್ಥ ಸಚಿವರ ಹೇಳಿಕೆಯನ್ನು ಪತ್ರಿಕೆಯಲ್ಲಿ ಓದಿದೆ. ಎಕಾನಮಿ ಮೆಸರ್ಸ್‌ನ್ನು ಆರೋಗ್ಯ ಇಲಾಖೆಗೆ ಒಳ ಪಡಿಸಿಲ್ಲ ಎಂದು ಆವರು ಹೇಳಿದ ಮಾತು ನನ್ನ ನೆನಪಿಗೆ ಬರುತ್ತದೆ. ಒಂದೇ ರಾಜ್ಯದ ಮಂತ್ರಿಮಂಡಲದ ಎರಡು ಜನ ಸದಸ್ಯರು ಶ್ರೀಮಾನ್ ಗೋಪ್ಪಡೆಯವರು ಮತ್ತು ಸಿದ್ದವೀರಪ್ಪನವರು ಬೇರೆ ಬೇರೆ ರೀತಿ ಹೇಳಿಕೆಕೊಟ್ಟಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.— ಅವರೇ ಕ್ಲಾರಿಫೈಮಾಡಿದ್ದಾರೆ, ಮಂತ್ರಿ ಪುನಃ ಪುನಃ ಅದನ್ನೇ ತ್ತುವುದು ಸರಿಕಾಣುವುದಿಲ್ಲ. ಅಂತಹ ತೊಂದರೆ ಇಲ್ಲ ಎಂದು ಆರೋಗ್ಯ ಸಚಿವರೇ ಹೇಳಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ಡೈರೆಕ್ಟರ ಆಫೀಸಿನಲ್ಲಿ ವಿಚಾರಿಸಿದರೆ ಎಕಾನಮಿ ಮೆಶರ್ಸ್ ಇದೆ ಏನು ಮಾಡಲುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ಡೈರೆಕ್ಟರ್ ಆಫ್ ಹೆಲ್ತ್ ಮತ್ತು ಡಿಸ್ಪೆನ್ಸರಿ ಹೆಲ್ತ್ ಆಫೀಸಿನಲ್ಲಿ ವಿಚಾರ ಮಾಡಿದ್ದೇನೆ. ಎಕಾನಮಿ ಮೆಶರ್ಸ್ ನಮಗೂ ಅಪ್ಲೈಯಾಗಿದೆ, ಸರ್ಕಾರದ ಆದೇಶದ ಪ್ರಕಾರ ಹಣವಿಲ್ಲ; ಆ ದೃಷ್ಟಿಯಿಂದ ಔಷದಿ ಎಷ್ಟು ಪ್ರಮಾಣದಲ್ಲಿ ಬರಬೇಕಿತ್ತೋ ಅಷ್ಟು ಪ್ರಮಾಣದಲ್ಲಿ ಸಪ್ಲೈ ಮಾಡುತ್ತಿಲ್ಲವೆಂದು ಅವರು ಹೇಳಿದ್ದಾರೆ. ಕೇಮಕಾತಿಯ ವಿಷಯದಲ್ಲೂ ಕೂಡ ಅಷ್ಟೆ ಸ್ಟಾಫ್ ನರ್ಸ್‌ಗಳು, ಡಾಕ್ಟರ್ಸ್‌ಗಳು ಬೇಕು ಎಂದು ಶ್ರೀ ದೇವೇಗೌಡರೂ ಕೂಡ ಪ್ರಸ್ತಾಪಮಾಡಿದ್ದಾರೆ. ಇದು ಒಂದು ದೊಡ್ಡ ಗಲಾಟೆಗೆ ಇಟ್ಟುಕೊಂಡಿದೆ. ಏನು ಮಾಡುವುದಕ್ಕೂ ಕೂಡ ಸಾಧ್ಯವಾಗುವುದಿಲ್ಲ. ಆಸ್ಪತ್ರೆಗಳಲ್ಲಿ ಔಷಧಿಯಿಲ್ಲ, ಡಾಕ್ಟರ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಶ್ರೀ ಸಿದ್ದವೀರಪ್ಪನವರು ೬೦೦-೭೦೦ ಡಾಕ್ಟರರುಗಳನ್ನು ತೆಗೆದುಕೊಳ್ಳುವುದಕ್ಕೆ ಪಿ.ಎಸ್.ಸಿ.ಗೆ ತಿಳಿಸಿದ್ದೇವೆ. ಸದ್ಯದಲ್ಲಿಯೇ ನೇಮಕಾತಿ ಆಗುತ್ತದೆ ಎಂಬ ವಿಷಯವನ್ನು ತಿಳಿಸಿದರು. ಆದ್ದರಿಂದ ಡಾಕ್ಟರರುಗಳು ಸ್ಟಾಫ್‌ನರ್ಸ್‌ಗಳು ಮತ್ತು ಕ್ಲಾಸ್ ಮೂರು ಮತ್ತು ಕ್ಲಾಸ್ ನಾಲ್ಕರ ಅಪಾಯಿಂಟ್ಸ್ ಬಗ್ಗೆ ತೀವ್ರ ಗಮನಕೊಡಬೆ ಕೆಂದೂ ಕೇಳಿಕೊಳ್ಳುತ್ತೇನೆ ಈಗ ಅನೇಕ ಆಸ್ಪತ್ರೆಗಳಲ್ಲಿ ಇದರಿಂದಾಗಿ ಬಹಳ ತೊಂದರೆ ಪಡುತ್ತಿದ್ದಾರೆ. ಇನ್ನೊಂದು ಅಂಶ ಈ ಸಂಬಂಧದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸಣ ನೀರಾವರಿ ಯೋಜನೆಗಳು ಏವಂ ಇವೆ ಅವುಗಳಿಗೆ ಎಕಾನಮಿ ಮೆಶರ್ಸ್‌ನ್ನು ಲಾಗು ಮಾಡಬಾರದು.

ಶ್ರೀ ಎಂ. ವೈ. ಘೋರ್ಪಡೆ.— ಲಾಗು ಆಗಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ, ಮೈನರ್ ಇರಿಗೇಷನ್ ವರ್ಕ್ಸ್ ಫೀಸಿಬಿಲಿಟಿ ಲಿಮಿಟನ್ನು ರಿಲಾಕ್ಸ್ ಮಾಡಬೆ ಮೋದರೆ, ಒಂದೂ ಕಾಮಗಾರಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ ವೈ ಘೋರ್ಪಡೆ — ಮೇಜರ್ ಇರಿಗೇಷನ್‌ಗೆ ೩೩ ಕೋಟಿ ರೂಪಾಯಿಗಳು ಇಟ್ಟಿದ್ದಲ್ಲದೆ ಮೈನರ್ ಇರಿಗೇಷನ್‌ಗೆ ಪ್ರತ್ಯೇಕವಾಗಿ ೬.೭ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದೆ. ಯಾವ ಎಕಾನಮಿ ಆರ್ಡರ್ಸ್ ಇದಕ್ಕೆ ಅನ್ವಯಿಸುವುದಿಲ್ಲ. ಅದರ ಪ್ರಕಾರ ತಿಂಗಳಿಗೆ ಎಷ್ಟು ಖರ್ಚು ಮಾಡಬೇಕಾಗಿದೆಯೋ ಅಷ್ಟನ್ನು ಖರ್ಚು ಮಾಡುತ್ತಾ ಇದ್ದೇನೆ. ಕೆಲವೊಂದಿ ಇದಕ್ಕಿಂತ ಜಾಸ್ತಿಮಾಡಬೇಕಾಗಿದೆ. ೬.೭ ಕೋಟಿ ರೂಪಾಯಿಗಳಷ್ಟು ಮೈನರ್ ಇರಿಗೇಷನ್ ಮೇಲೆ ಖಂಡಿತ ವಾಗಿಯೂ ಖರ್ಚುಮಾಡುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಅಮೌಂಟ್ಸ್ ಇದ್ದರೂ ಎಸ್ಟಿಮೇಟ್‌ಗಳು ಮಂಜೂರಾಗುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.— ೬ ಕೋಟಿ ಟಿಲ್ಲರೆ ಇದೆ ಎಂದು ಹೇಳುತ್ತಿದ್ದೀರಿ. ಹಿಂದಿನ ವರ್ಷದಲ್ಲಿ ಎಷ್ಟು ಇತ್ತು ಎಂದು ದಯವಾಮಾಡಿ ತಿಳಿಸಿ.

ಶ್ರೀ ಡಿ. ದೇವರಾಜ ಅರಸ್.— ಎರಡೂವರೆ ಮೂರು ಕೋಟಿ ರೂಪಾಯಿ ಖರ್ಚಾಗುತ್ತಿತ್ತು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅರ್ಥ ಸಚಿವರು ಪ್ರತ್ಯೇಕವಾಗಿ ಹಣವನ್ನು ಸಣ್ಣ ನೀರಾವರಿ ಯೋಜನೆಗೆ ಇಟ್ಟಿದ್ದೇವೆ ಎಂಬುದನ್ನು ಹೇಳಿದ್ದಾರೆ. ನಾವು ಈ ಮಾತನ್ನು ನಂಬಿ ಮೈನರ್ ಇರಿಗೇಷನ್‌ಗೆ ತೊಂದರೆಯಾಗುವುದಿಲ್ಲವೆನ್ನುವ ಅಭಿಪ್ರಾಯವನ್ನು ತಳೆದು ಇದ್ದೆವು. ಆದರೆ ಇಲಾಖೆಯಲ್ಲಿ ಕೇಳಿದರೆ ಗೊತ್ತಾಗುತ್ತದೆ. ಒಂದು ವೇಳೆ ಸಣ್ಣ ನೀರಾವರಿ ಯೋಜನೆಗೆ ಎಕಾನಮಿ ಮೆಶರ್ಸ್ ವ್ಯಾಪ್ತಿಯಲ್ಲಿ ಹಣ ಕಡಿತ ಮಾಡುವುದಿಲ್ಲವೆನ್ನುವ ಅಭಿಪ್ರಾಯ ಹೇಳುವುದಾದರೆ ದಯವಾಮಾಡಿ ಇನ್ನೊಮ್ಮೆ ಸಂಬಂಧಪಟ್ಟವರಿಗೆ ಬರೆಯಬೇಕು. ಯಾವ ಹಣ ಈ ಬಾಬಿಯಲ್ಲಿ ಕೋತಮಾಡಿಲ್ಲವೆನ್ನುವ ಅಂಶವನ್ನು ಅವರಿಗೆ ತಿಳಿಸಬೇಕು.

ಶ್ರೀ ಎಂ. ವೈ ಘೋರ್ಪಡೆ — ನಾನು ಸ್ಪಷ್ಟವಾಗಿ ಹೇಳಿದರೂ ಕೂಡ ಪದೇ ಪದೇ ಅದೇ ಮಾತನ್ನು ಹೇಳುತ್ತಿದ್ದೀರಿ ಆರು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಪ್ರತ್ಯೇಕವಾಗಿ ಮೈನರ್ ಇರಿಗೇಷನ್‌ಗೆ ಕೊಡ ತ್ತಿದ್ದೇವೆ, ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದರೂ ಕೂಡ ಬರೇ ಮಾತನಾಡಿದರೆ ನಾನು ಏನು ಮಾಡಲಿ ?

ಶ್ರೀ ಎಸ್. ಬಂಗಾರಪ್ಪ.— ನಾನು ಮಾತನಾಡುವುದಿಲ್ಲ. ಇಲಾಖೆಯವರು ಹಾಗೆ ಹೇಳುತ್ತಾರೆ.

ಶ್ರೀ ಎಂ. ವೈ ಘೋರ್ಪಡೆ. —ಇಲಾಖೆಯವರು ಮಾತನಾಡುವುದನ್ನು ನಂಬಬೇಡಿ.

ಶ್ರೀ ಎಸ್. ಬಂಗಾರಪ್ಪ.—ಇಲಾಖೆಯವರಿಗೆ ತಿಳಿಸಿ, ಸರ್ಕಾರಿ ಆದೇಶವನ್ನು ಪರಿಪಾಲನೆ ಮಾಡು ವುದಿಲ್ಲವೆಂದು ಅರ್ಥವಾಗುತ್ತದೆ. ತಮ್ಮ ಮಾತನ್ನು ಒಪ್ಪುತ್ತೇನೆ. ಈ ಸದನದಲ್ಲಿ ಹೇಳಿದ ಮೇಲೆ ಅದು ಸರಿ ಇರುತ್ತದೆ. ದಯವಾಮಾಡಿ ಇಲಾಖೆಗೆ ಸೂಚನೆಕೊಡಿ. ಎಲ್ಲ ಇಲಾಖೆಯವರೂ ಇದೇ ರಾಗ ಎತ್ತಿದ್ದಾರೆ. ಎಕಾನಮಿ ಮೆಶರ್ಸ್‌ಎಂದು ಹೇಳುತ್ತಾ ಒಂದು ಕೆಲಸವನ್ನೂ ಮಾಡುತ್ತಿಲ್ಲ. ಎಕಾನಮಿ ಮೆಸರ್ಸ್ ಮಾಡುವುದಕ್ಕೆ ಅನ್ವಯವಾಗುತ್ತದೆ, ಯಾವುದಕ್ಕೆ ಅನ್ವಯವಾಗುವುದಿಲ್ಲ ಎಂದು ತಿಳಿಸಬೇಕು.

ಇನ್ನು ಲೋನ್ಸ್ ಹಣ ಹಿಂದಕ್ಕೆ ಪಡೆಯುವ ವಿಚಾರ ಹೇಳಿದ್ದೀರಿ. ೧೫೦ ಲಕ್ಷ ಇರಬಹುದು. ಕೋ ಆಪರೇಟಿವ್ ಡಿಮಾಂಡ್ ನಂ ೩.೭ ಕ್ಕೆ ಸಂಬಂಧಪಟ್ಟ ಹಾಗೆ ಇಲ್ಲಿ ತಾವು ಇಟ್ಟಿದ್ದೀರಿ. ಸಹಕಾರ ಇಲಾಖೆಯವರು ಕೊಟ್ಟಿರತಕ್ಕ ಹಣವನ್ನು ವಾಪಸ್ ಪಡೆಯುವುದಕ್ಕಾಗುತ್ತಿಲ್ಲ. ಸಹಕಾರಿ ತತ್ವ ವಿಫಲ ವಾಗಿದೆ. ಯಾವ ಸಾಲಗಳನ್ನು ಹೇಗೆ ವಸೂಲುಮಾಡುತ್ತಾರೆ ಎನ್ನುವುದರ ಬಗ್ಗೆ ಚಿತ್ರದುರ್ಗದಲ್ಲಿ ಮುಖ್ಯ ಮಂತ್ರಿಗಳು ಇತ್ತೀಚೆಗೆ ಪತ್ರಿಕೆಯಲ್ಲಿ ಕೊಟ್ಟ ಒಂದು ಹೇಳಿಕೆಯನ್ನು ಓದಿದೆ. ಸಹಕಾರಿ ಆಂದೋಲನದ ಹೆಸರಿನಲ್ಲಿ ಹಣ ಲೂಟಿ ಹೊಡೆದಿದ್ದಾರೆ. ಈಗಿತ್ತು ಹಣ ಲೂಟಿ ಹೊಡೆಯುವುದಕ್ಕೆ ಒಳ್ಳೆಯ ಜಾಗವೆಂದರೆ ಸೊಸೈಟಿಗಳು. ಇಲ್ಲಿ ಲೂಟಿ ಮಾಡಿರತಕ್ಕ ಹಣವನ್ನು ವಾಪಸ್ ಪಡೆಯುವಕ್ಕೆ ಕಾನೂನು ವ್ಯಾಪ್ತಿ ಸರಿಯಿಲ್ಲವೆಂದು ನನ್ನ ಅಭಿಪ್ರಾಯವನ್ನು ಮುಖ್ಯಮಂತ್ರಿಯವರು ಚಿತ್ರದುರ್ಗದಲ್ಲಿ

(ಶ್ರೀ ಎಸ್. ಬಂಗಾರಪ್ಪ)

ಕೊಟ್ಟ ಹೇಳಿಕೆಯ ಪ್ರಕಾರ ಒಪ್ಪಿದ್ದಾರೆ. ನಾವು ಈ ಹಣವನ್ನು ವಸೂಲುಮಾಡುವುದಕ್ಕೆ ಬೇರೆ ಕಾನೂನು ತಂದು ಒಂದು ಬಿಗಿಯಾಗಿ ಮತ್ತು ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆಂಬ ಅಶಯವನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಬರಬೇಕಾದ ಎಲ್ಲಾ ಸಾಲಗಗನ್ನು ವಸೂಲು ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಿಗೆ ಈಗಲೂ ಕೂಡ ಒಂದು ಮನವಿ ಮಾಡುತ್ತೇನೆ. ಆ ಬಗ್ಗೆ ಕಾನೂನು ತರಬೇಕು, ವಸೂಲಾತಿಯ ಕಾರ್ಯಕ್ರಮ ಯಾವ ರೀತಿ ಆಗಬೇಕು, ವಾರೆಂಟ್, ಅರೆಸ್ಟ್ ಏನೇನು ಮಾಡಬೇಕು ಅದೆಲ್ಲವನ್ನು ಮಾಡಿ ಹಣ ವಸೂಲು ಮಾಡತಕ್ಕ ಕಾರ್ಯಕ್ರಮ ಹಾಕಿಕೊಳ್ಳದಿದ್ದರೆ ಸಹಕಾರಿ ಆಂದೋಲನದಲ್ಲಿ ನಾವು ಹಲವಾರು ಕೋಟಿ ರೂಪಾಯಿಗಳನ್ನು ತೊಡಗಿಸಿದ್ದೇವೆ ಅದು ಸಂಪೂರ್ಣವಾಗಿ ಮುಳುಗಿ ಹೋಗುತ್ತದೆ. ೧೫೦ ಲಕ್ಷ ರೂಪಾಯಿ ಬಿರುತ್ತದೆಂದು ಹೆಚ್ಚುವರಿ ಬೇಡಿಕೆಯಲ್ಲಿ ಪ್ರಸ್ತಾಪಮಾಡಿದ್ದಾರೆ. ಅದು ವಸೂಲಾತಿ ಆಗಬಹುದೇ ಎನ್ನುವ ಅನುಮಾನ ದೃಷ್ಟಿಯಿಂದ ಹೇಳುತ್ತಿದ್ದೇನೆ ಅಷ್ಟೇ ಅಲ್ಲದೆ ಅನೇಕ ಬಾಬುಗಳೆಂದಲೂ ಕೂಡ ಸರ್ಕಾರಕ್ಕೆ ಹಣ ಬರಬೇಕಾಗಿದೆ. ಅದನ್ನೂ ಅದೆಲ್ಲವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಪ್ರಮುಖವಾಗಿ ರೊಡ್ಸ್ ಮತ್ತು ಬ್ರಿಜರ್ ಎನ್ನತಕ್ಕಂಥಾದ್ದು ಕೂಡ ಪ್ರಸ್ತಾಪ ಮಾಡಿದ್ದಾರೆ. ಆದರ ಬಗ್ಗೆ ಮಾನ್ಯ ಅಧ್ಯಕ್ಷರೇ ಒಂದು ಅಂಶ ಸದನದ ಗಮನಕ್ಕೆ ತರಬಯಸುತ್ತೇನೆ. ಎಲ್ಲ ಬ್ರಿಜಸ್ ಬಗ್ಗೆ ಬ್ರಿಜಸ್ ಕಾರ್ಪೊರೇಷನ್ ಒಂದು ಮಾಡುತ್ತೇವೆ ಎನ್ನತಕ್ಕ ಆಶಯವನ್ನು ಹಿಂದೆ ತಿಳಿಸಿದ್ದರು. ಲೋಕೋಪಯೋಗಿ ಸಚಿವರು ಈ ಮಾತನ್ನು ಹೇಳಿ ಸುಮಾರು ಎರಡು ವರ್ಷಗಳು ಕಳೆದು ಹೋಯಿತು. ಅದರ ಬಗ್ಗೆ ಇಲಾಖೆಯವರು ತಯಾರು ಮಾಡಿದ ವರದಿ ಕೂಡ ಸರ್ಕಾರದ ವಶದಲ್ಲಿದೆ ಎಂದು ಕೇಳಿದ್ದೇನೆ.

ಬ್ರಿಡ್ಜ್ ಕಾರ್ಪೊರೇಷನ್ ಮಾಡುವ ಬಗ್ಗೆ ವರದಿ ಬಂದ ಕೂಡಲೇ ಸರಕಾರ ಮಾಡುತ್ತದೆ ಎಂದು ಹೇಳಿದ್ದರು. ಈಗಾಗಲೇ ಇದರ ವರದಿ ಬಂದು ಎರಡು ವರ್ಷಗಳಾಗಿದೆ ಈಗಲಾದರೂ ಸರಕಾರ ಕೂಡಲೇ ನಮ್ಮ ರಾಜ್ಯಕ್ಕೆ ಒಂದು ಬ್ರಿಡ್ಜ್ ಕಾರ್ಪೊರೇಷನ್‌ನನ್ನು ಬೇಗನೆ ರಚನೆ ಮಾಡಬೇಕೆಂದು ಹೇಳುತ್ತೇನೆ ಇದರ ಮೂಲಕ ಯಾವ ರೀತಿ ಸಣ್ಣ ಸೇತುವೆಗಳು ಹಾಗೂ ದೊಡ್ಡ ಸೇತುವೆಗಳ ಕೆಲಸಗಳನ್ನು ಮಾಡಬೇಕು ಎನ್ನುವುದು ಗೊತ್ತಾಗುತ್ತದೆ ಮಾನ್ಯ ಮಂತ್ರಿಗಳು ಇದಕ್ಕೆ ಸ್ಪಷ್ಟವಾಗಿ ಹೇಳುವ ಎಂದ ಇಂತಹ ಒಂದು ಬ್ರಿಡ್ಜ್ ಕಾರ್ಪೊರೇಷನ್ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಇನ್ನು ರೂರಲ್ ಕಮ್ಯೂನಿಕೇಷನ್ಸ್‌ಗಳ ಕೆಳಗೆ ಬರುವ ರೋಡುಗಳನ್ನು ಸರಿಮಾಡಲು ಸರಕಾರಕ್ಕೆ ಹಣದ ಕೊರತೆ ಇದೆ ಎಂದು ಕೇಳುತ್ತೇವೆ. ಹಿಂದೆ ಕೇಂದ್ರ ಸರಕಾರದ ಅನುಮತಿಯಿಂದ ಸಹಾಯ ಪಡೆದು ಪ್ರತಿಯೊಂದು ತಾಲ್ಲೂಕಿನಲ್ಲೂ ಐವತ್ತು ಮೈಲಿಗಳಷ್ಟು ರಸ್ತೆಗಳ ಕೆಲಸವನ್ನು ಮಾಡಲು ಅವಕಾಶ ವಿರುತ್ತದೆ ಎಂದು ಹೇಳಿದ್ದರು. ಆದರೆ ಇದರ ಬಗ್ಗೆ ಏನೂ ಕೆಲಸಗಳಾಗಿಲ್ಲ. ಇವನ್ನು ನಾವು ಕೆಳೆದ ಬಜೆಟ್ಟಿನಲ್ಲಿ ಸದನದಲ್ಲೂ ಪ್ರಸ್ತಾಪ ಮಾಡಿದ್ದೇವೆ. ಕೆಲವು ಕಡೆ ಮಾತ್ರವೂ ರಸ್ತೆ ಕೆಲಸಗಳು ಅರ್ಧಂಬರ್ಧವಾಗಿದೆ ಇನ್ನು ಕೆಲವು ಕಡೆ ರಸ್ತೆಗಳ ಕೆಲಸಗಳೇ ಆಗಲಿಲ್ಲ. ಇದರ ಬಗ್ಗೆ ಕೇಂದ್ರ ಸರಕಾರ ಕೊಡುತ್ತಿದ್ದಾರೆಯೇ ? ಇಲ್ಲವೇ ರಾಜ್ಯ ಸರಕಾರವೇ ಇದಕ್ಕೆ ಹಣ ಕೊಡುತ್ತಿದ್ದಾರೆಯೇ ? ಇದರ ಪ್ರಗತಿ ಇದುವರೆಗೆ ಎಷ್ಟಾಗಿದೆ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ. ಇಂದು ಹಳ್ಳಿಗಾಡಿನಲ್ಲಿ ಯಾವ ರಸ್ತೆಗಳ ಕೆಲಸಗಳೂ ಸ್ಥಗಿತವಾಗಿವೆ ನಾವು ಇಲ್ಲಿರುವ ಅಸಿಸ್ಟೆಂಟು ಇಂಜನೀಯರನ್ನಾಗಲೀ ಇಲ್ಲವೇ ಎಕ್ಸಿಕ್ಯೂಟೀವ್ ಇಂಜನೀಯರನ್ನಾಗಲೀ ಇಂತಹ ರಸ್ತೆಗಳ ಕೆಲಸ ಇಲ್ಲವೇ ಬೇರೆ ಕೆಲಸಗಳಾಗಬೇಕೆಂದು ಹೇಳಿದರೂ ಅವರು ಸರಕಾರದಿಂದ ನಮಗೆ ದುಡ್ಡನ್ನು ಒದಗಿಸಿಲ್ಲ ಎಂದು ಹೇಳುವುದು ಸಾಧಾರಣವಾಗಿವೆ ಮತ್ತು ಎಲ್ಲ ಕೆಲಸಕಾರ್ಯಗಳೂ ಸ್ಥಗಿತವಾಗಿವೆ.

ಇನ್ನು ಇದರಲ್ಲಿ ಸಾಲದ ಬಗ್ಗೆ ಅರ್ಥ ಸಚಿವರು ಪ್ರಸ್ತಾಪ ಮಾಡುತ್ತಾ ಹಿಂದೆ ಇದ್ದ ಸರಕಾರ ಈ ಸರಕಾರಕ್ಕೆ ಸುಮಾರು ೭೦-೮೦ ಕೋಟಿಯಷ್ಟು ಓವರ್ ಡ್ರಾಫ್ಟ್ ಹೊರೆಯನ್ನು ಹೊರಿಸಿತ್ತು ಇದನ್ನು ಸರಿಮಾಡುವುದೇ ಈ ಸರಕಾರಕ್ಕೆ ಒಹಳ ಕಷ್ಟವಾಯಿತು ಎಂದು ಹೇಳಿತ್ತಿದ್ದರು. ಈಗ ಇವೆಲ್ಲಾ ಪೂರ್ಣವಾಗಿ ಮುಗಿದಿದೆಯೇ ? ಇಲ್ಲವೇ ಇನ್ನೆಷ್ಟು ಬಾಕಿ ಇದೆ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ. ಏಕೆಂದರೆ ಕೆಲವು ದಿನಗಳ ಹಿಂದೆ ಕೇಂದ್ರ ಸರಕಾರದ ಮಂತ್ರಿಗಳಾದ ಶ್ರೀ ವೈ. ಬಿ. ಚಾವಾಣ್‌ರವರು ಇನ್ನು ಮುಂದೆ ರಾಜ್ಯಗಳಿಗೆ ಯಾವ ರೀತಿಯ ಓವರ್ ಡ್ರಾಫ್ಟ್‌ಗಳನ್ನೂ ಕೊಡುವುದಿಲ್ಲ ಮತ್ತು ಹಣ ಸಹಾಯವನ್ನೂ ಕೊಡಲಾಗುವುದಿಲ್ಲ, ಎಲ್ಲ ರಾಜ್ಯ ಸರಕಾರಗಳೂ ಅವುಗಳ ಸಾಪ್ಲೂಸ್‌ಗಳನ್ನು ಅವರೇ ಪೆಟ್ಟಿಗೆ ಹಚ್ಚಿ ಸರಿಮಾಡಿಕೊಳ್ಳಬೇಕು ಎಂದು ಹೇಳಿದ್ದರು. ಇದರ ಬಗ್ಗೆ ಈಚೆಗೆ ನಮ್ಮ ರಾಜ್ಯದ ಅರ್ಥ ಸಚಿವರನ್ನು ಇಲ್ಲಿ ತೆರಿಗೆ ಹಚ್ಚು ಮಾಡುತ್ತೀರಾ ಎಂದು ಕೇಳಿದುದಕ್ಕೆ ಅವರು ಇಲ್ಲಿ ಯಾವ ಹೆಚ್ಚು ತೆರಿಗೆ

ಾನನ್ನೂ ಹಾಕುವುದಿಲ್ಲ ಎಂದು ಹೇಳಿದರು. ಕೇಂದ್ರ ಸರ್ಕಾರ ಕಾನೂನು ಮೂಲಕ ಯಾವ ತೆರಿಗೆಯನ್ನು ರಾಜ್ಯಗಳ ಮೇಲೆ ಹೊರಿಸಲಾಗ ವುದಿಲ್ಲ ಯಾವ ತೆರಿಗೆ ಹಾಕಬೇಕಾದರೂ ಅದು ರಾಜ್ಯ ಸರಕಾರದ ಜವಾಬುದಾರಿಗೆ ಸೇರಿದ್ದು. ಇದರ ಬಗ್ಗೆ ಪ್ಲಾನಿಂಗು ಕಮಿಷನ್ನಿನವರ ಆದೇಶ ಸರಕಾರಕ್ಕೆ ಏನು ಆದೇಶ ಬಂದಿದೆ ಎನ್ನುವುದೂ ಗೊತ್ತಾಗಿಲ್ಲ. ಕಾನೂನು ಪ್ರಕಾರ ಅಂತಹ ಯಾವ ಆದೇಶ ಕೊಡುವುದೂ ಇದರಲ್ಲಿ ಅವಕಾಶವಿಲ್ಲ. ಆದರೆ ನನಗೆ ತಿಳಿದಂತೆ ರಾಜ್ಯ ಸರಕಾರ ಕೇಂದ್ರ ಸರ್ಕಾರದ ಒತ್ತಡಕ್ಕೆ ಮಣಿಯಬೇಕಾಗುತ್ತದೆ ಎನ್ನುವ ಅಂಶ ಈಚೆಗೆ ಬೆಳಕಿಗೆ ಬರುತ್ತಿದೆ. ಕೇಂದ್ರ ಸರ್ಕಾರಕ್ಕೆ ತೆರಿಗೆ ಹೆಚ್ಚು ಹೊರಿಸಲು ಶಕ್ತಿಯಿಲ್ಲವಿದ್ದರೂ ರಾಜ್ಯ ಸರಕಾರವನ್ನು ಒತ್ತಾಯ ಮಾಡಿ ಮುಂದೆ ಹೆಚ್ಚಿನ ತೆರಿಗೆ ಹೊರಿಸುವಂತೆ ಮಾಡಬಹುದು.

ಇನ್ನು ನಮ್ಮ ರಾಜ್ಯದ ಎಕಾನಮಿ ಕಮಿಟಿ ರಿಪೋರ್ಟುಗಳ ಪ್ರಕಾರ ರಾಜ್ಯದಲ್ಲಿ ಸಂಪನ್ಮೂಲಗಳನ್ನು ಯಾವ ರೀತಿ ಹೆಚ್ಚಿಸಬಹುದು ಎಂದು ವರದಿ ಬಂದಿದೆ. ಇದರ ಬಗ್ಗೆ ಯಾವ ಕೆಲಸಗಳನ್ನು ಇವರೆಗೆ ಸರಕಾರ ಮಾಡಿದೆ ಎನ್ನುವುದನ್ನು ತಿಳಿಸಬೇಕಾಗಿ ಕೋರುತ್ತೇನೆ. ರಾಜ್ಯ ಸರಕಾರವೇನೋ ಇಲ್ಲಿ ತೆ ಗೆ ಗಳನ್ನು ಹಾಕುವುದಿಲ್ಲ ಎಂದು ಹೇಳಿರುವ ಮಾತಿನಲ್ಲಿ ನಮಗೆ ನಂಬಿಕೆ ಇದೆ. ಇದರ ಬಗ್ಗೆ ವಿಚಾರ ಮಾಡ ಬೇಕು ಎಂದೂ ಮಾತ್ರ ಹೇಳುತ್ತೇನೆ. ಇನ್ನು ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡಲು ಹೋಗುವುದಿಲ್ಲ.

ಇನ್ನು ನಮ್ಮ ರಾಜ್ಯದಿಂದ ತಮಿಳುನಾಡಿಗೆ ಹೆಚ್ಚು ನೀರು ಕೊಟ್ಟಿದ್ದಾರೆಂದು ನಮಗೆ ಗೊತ್ತಾಗು ತ್ತದೆ. ಇದರ ಬಗ್ಗೆ ಮಾನ್ಯ ಸದಸ್ಯರು ಕೆಲವರು ಇಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯ ಮಂತ್ರಿ ಗಳು ಹೇಳಿಕೆ ಕೊಟ್ಟು ಇದರಲ್ಲಿ ಬಿಡುತಕ್ಕ ಹೆಚ್ಚು ನೀರನ್ನು ಮಾತ್ರ ಬಿಡಲಾಗಿದೆ ಎಂದರು. ಇದು ಕಾಕ ತಾಳೀಯ ನ್ಯಾಯದಂತೆ ನಮ್ಮ ರಾಷ್ಟ್ರದ ಅಧ್ಯಕ್ಷರ ಚುನಾವಣೆ ನಡೆಯುವ ವೇಳೆಗೆ ಜಾಸ್ತಿ ನೀರನ್ನು ತಮಿಳುನಾಡಿಗೆ ಕೊಟ್ಟಿದ್ದೀರಿ ಎನ್ನುವಂತೆ ನಮಗೆ ತೋರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳುತ್ತಾ ಅವರಿಗೆ ಹೆಚ್ಚುವರಿ ಯಾಗಿ ಕೊಡಬೇಕಾದ ನೀರನ್ನು ಅಡಜಸ್ಟ್ ಮಾಡಲು ಕೊಟ್ಟಿ ದೆ ಕೇ ವಿನಾ ಇದರಲ್ಲಿ ಜಾಸ್ತಿ ನೀರು ಹೋ ಕ್ಕೆ ಬಿಟ್ಟಿಲ್ಲ ಎಂದು ಹೇಳಿದರು. ನನಗೆ ಇದರ ಅರ್ಗ್ಯುಮೆಂಟು ಏನಿದೆಯೋ ಗೊತ್ತಿಲ್ಲ ಒಂದು ವೇಳೆ ಹೆಚ್ಚಾಗಿ ನೀರು ಬಿಟ್ಟಿದ್ದರೆ ತಮಿಳು ನಾಡಿನವರು ಇದಕ್ಕೆ ಏನು ಪರಿಹಾರ ಕೊಟ್ಟರು ಎನ್ನುವುದೂ ತಿಳಿಯಬೇಕಲ್ಲ. ಇದರ ಬಗ್ಗೆ ವಿಚಾರ ಮಾಡಬೇಕು.

ಇಷ್ಟು ಮಾತುಗಳನ್ನು ಹೇಳಿ ನಾನು ಮೇಲೆ ಹೇಳಿದ ಕಾರಣಗಳಿಗಾಗಿ ಇಲ್ಲಿ ತಂದಿರುವ ಬೇಡಿಕೆ ಗಳನ್ನು ವಿರೋಧಿಸುತ್ತೇನೆ ಮತ್ತು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ತಂದಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಇಲ್ಲಿ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ಇಂತಹ ಹೆಚ್ಚುವರಿ ಬೇಡಿಕೆಗಳನ್ನು ಯಾವ ಸಂದರ್ಭದಲ್ಲಿಡುತ್ತಾರೆ ಎಂದರೆ ನಮ್ಮ ಗೆಳೆಯ ಸದಸ್ಯರು ಹೇಳಿದ ಹಾಗೆ ರಾಜ್ಯದಲ್ಲಿ ಮಿತವ್ಯಯ ಸಾಧಿಸಬೇಕೆಂದು ಇರುವ ಸಂದರ್ಭದಲ್ಲಿ ಮಿತವ್ಯಯದ ಕಲ್ಪನೆಯೇ ಇಲ್ಲದಂತೆ ಇಂತಹ ಒಂದು ಬೇಡಿಕೆಗಳನ್ನು ಇಲ್ಲಿ ತರುತ್ತಿದ್ದಾರೆ. ಇದಕ್ಕೆ ಕಾರಣ ಇದರಲ್ಲಿ ರುವ ಡಿಮ್ಯಾಂಡು ನಂಬರು ೧೫ನ್ನು ನೋಡಿದರೆ ಗೊತ್ತಾಗುತ್ತದೆ ಈ ಡಿಮ್ಯಾಂಡಿನಲ್ಲಿ ಪೋಲೀಸು ಇಲಾಖೆಗೆ ಒಂದು ಡಿಟಿಕ್ಟೀವ್ ಕಾರ್ಪ್ಸ್ ಎನ್ನುವುದನ್ನು ಮಾಡಲು ಹೊರಟಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ನಮ್ಮ ರಾಷ್ಟ್ರೀಯ ಇಲಾಖೆಯಲ್ಲಿರತಕ್ಕ ಜನರಲ್ಲಿ ಬುದ್ಧಿ ಕಡಮೆಯಾಗಿದೆ ಎಂದು ನಾವು ಹೇಳಲ್ಲ. ನವ್ಕಲ್ಲಿರತಕ್ಕ ಅಧಿಕಾರಿಗಳು ಕೆಲಸ ಮಾಡುವುದರಲ್ಲಿ ಬಹು ಬುದ್ಧಿವಂತರಾಗಿದ್ದಾರೆ ಮತ್ತು ಅವರಲ್ಲಿ ಅಂತಹ ಶಕ್ತಿಯೂ ಇವೆ. ಆದರೆ ಮಾಡತಕ್ಕ ಕೆಲಸಗಳನ್ನು ಪ್ರಾಮಾಣಿಕವಾಗಿ ಹಾಗೂ ಯೋಗ್ಯವಾಗಿ ಇವರಿಂದ ಕೆಲಸಗಳನ್ನು ಮಾಡಿದ್ದರೆ ಇಂತಹ ಒಂದು ಹೆಚ್ಚುವರಿ ಇಲಾಖೆಯೇ ಬೇಕಾಗಿರಲಿಲ್ಲ. ಇದಕ್ಕಾಗಿ ಒಂದು ಹೊಸ ಒಂದು ವರ್ಗವನ್ನು ಸೃಷ್ಟಿಸಿ ಏಕೆ ಖರ್ಚು ಮಾಡಬೇಕಾಗಿತ್ತು ? ಇದು ಮಿತವ್ಯಯ ಸಾಧ್ಯ ಮಾಡಿದಂತಾಗುತ್ತದೆಯೇ ? ನೀವು ಮಿತವ್ಯಯ ಸಾಧಿಸುತ್ತೇನೆಂದು ಹೇಳಿದು ಎಲ್ಲಿಗೆ ಹೋಯಿತು ? ಇದಕ್ಕಾಗಿ ಈ ಖರ್ಚನ್ನು ಕೈಬಿಡಬೇಕೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ ಇದನ್ನು ಮಾಡಿದರೆ ಏನಾಗುತ್ತದೆಎಂದರೆ ಇಲ್ಲಿರುವ ಅಧಿಕಾರಿಗಳಲ್ಲಿ ಶಿಸ್ತಿಲ್ಲ ಯಾಗಲು ಅವಕಾಶವಾಗುತ್ತದೆ ಇಂತಹ ಒಂದು ಹೊಸ ವರ್ಗವನ್ನೇಕೆ ಸೃಷ್ಟಿ ಮಾಡಲು ಹೋಗುತ್ತೀರಿ ? ಇದು ಅನಾವಶ್ಯಕ.

ಇನ್ನು ಡಿಮ್ಯಾಂಡು ೨೫ರಲ್ಲಿ ಕೇಂದ್ರ ಸರಕಾರವವರು ಇಟ್ಟುಕೊಂಡಿರುವ ಒಂದು ಯೋಜನೆ ಎಂದರೆ ನ್ಯಾಷನಲ್ ಫಿಟ್‌ನೆಸ್ ಕಾರ್ಪ್ಸ್ ಎಂದು ಇತ್ತು ಇದರ ಆವಶ್ಯಕತೆಯನ್ನು ಈಗ ರಾಜ್ಯ ಸರಕಾರ ಪರಿಸಿಕೊಂಡು ಕೆಲಸ ಮಾಡಬೇಕೆಂದು ಹೊರಟಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಇದಕ್ಕೆ ಕೇಂದ್ರ ಸರಕಾರದವರು ಐದು ವರ್ಷಗಳ ಕಾಲ ಪೂರ್ತಿ ಹಣವನ್ನು ರಾಜ್ಯ ಸರಕಾರಕ್ಕೆ ಕೊಡುತ್ತಾರೆ. ರಾಜ್ಯಸರಕಾರಕ್ಕೆ ಯಾವ ಹೊರೆಯೂ ಬರುವುದಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ.—ಐದು ವರ್ಷಗಳಾದ ಮೇಲೆ ಏನು ಮಾಡಬೇಕು ? ಇದು ಹೇಗಿದೆ ಎಂದರೆ ಕೂಸನ್ನು ಐದು ವರ್ಷಕಾಲ ರಕ್ಷಣೆ ಮಾಡಬೇಕೆಂದು ಕೊಟ್ಟರೆ ಅದಾದ ಮೇಲೆ ಮುಂದೆ ಏನು ಮಾಡಬೇಕು ಇದರ ಬಗ್ಗೆ ತಕ್ಕ ವಿವರಗಳನ್ನು ಇಲ್ಲಿ ಕೊಡಬೇಕಾಗಿತ್ತು. ಮುಂದೆ ಇದು ರಾಜ್ಯದ ಮೇಲೆ ಬೀಳುತ್ತದೆಯೇ ಇಲ್ಲವೇ ಅವರಿಗೆ ಬಿಡುತ್ತೀರಾ ? ಹಿಂದೆ ಆಹಾರ ಇಲಾಖೆ ಮಾಡಿದರು ಅದೂ ಮುಚ್ಚಲ್ಪಟ್ಟಿತು. ಅಲ್ಲಿರುವವರು ಸರ್ಕಾರದಲ್ಲಿ ಸೇರಿಸಿ ಕೊಳ್ಳಿ ಎಂದು ಕೇಳಿದರು. ಜೋಗ್‌ನಲ್ಲಿ ಎಚ್ ಇ ಪಿ. ಇತ್ತು. ಅದನ್ನು ಮುಚ್ಚಿದರು. ಅಲ್ಲಿ ಕೆಲಸ ಮಾಡುತ್ತಿದ್ದವರನ್ನೆಲ್ಲ ಪವರ್ ಕಾರ್ಪೊರೇಷನ್ನಿಗೆ ಹೋಗಬೇಕು ಎಂದೂ ಕೇಳಿದ್ದಾರೆ. ನಾವೇ ಸಮಸ್ಯೆಯನ್ನು ಹುಟ್ಟು ಹಾಕಿದ ಹಾಗಾಗುತ್ತದೆ. ಈ ಕೆಲಸ ಪೂರೈಸಿದ ಮೇಲೆ ನಮ್ಮನ್ನು ಕೇಳಬೇಡಿ ನಿಮ್ಮ ಪಾಡು ನೀವು ನೋಡಿಕೊಳ್ಳುವುದಾದರೆ ಕೆಲಸ ಮಾಡಿ ಎಂದು ಹೇಳಬಹುದು. ಇದನ್ನು ದಯವಿಟ್ಟು ಕೈ ಬಿಡತಕ್ಕ ಕೆಲಸ ಮಾಡಿ. ಇಲ್ಲದೆ ಹೋದರೆ ನಾಳೆ ನಿಮ್ಮ ತಲೆ ಮೇಲೆ ಬಂದೂ ಕುಳಿತುಕೊಳ್ಳುತ್ತಾರೆ.

1-00 P.M.

ಭೂಸೇನೆಯ ಕಾರ್ಪೊರೇಷನ್ ಮಾಡಿದ್ದಾರೆ. ಭೂಸೇನೆ, ಅನ್ನ ಸೇನೆ ಎಂದು ಮೊದಲು ಪ್ರಾರಂಭ ಮಾಡಿದವರು ಡಾಕ್ಟರ್ ಲೋಹಿಯಾ ಅವರು. ಇದನ್ನು ಒಂದು ದೃಷ್ಟಿಯಿಂದ ಅವರು ಮಾಡಿದರು. ಇದಕ್ಕೆ ಒಂದು ದೊಡ್ಡ ಕಾರ್ಪೊರೇಷನ್ ಮಾಡಿಅದಕ್ಕೆ ದೊಡ್ಡ ಸಿಬ್ಬಂದಿವರ್ಗವನ್ನಿಟ್ಟು ಆಫೀಸು ಇದನ್ನೆಲ್ಲ ಮಾಡುತ್ತ ಕುಳಿತುಕೊಂಡರೆ ಏನಾಗಬಹುದು ಎಂಬುದು ನಮಗೆ ಗೊತ್ತಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇ ಗೌಡ.—ಯಾರಿಗಾದರೂ ಚೇರ್‌ಮನ್‌ಗಿರಿ ಕೊಡುವುದಕ್ಕೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ವಿರೋಧಪಕ್ಷದ ನಾಯಕರು ಹೇಳುವಂತೆ ಯಾರಿಗಾದರೂ ಚೇರ್‌ಮನ್‌ಗಿರಿ ಕೊಡಬೇಕೆನ್ನುವ ಉದ್ದೇಶದಿಂದ ಕಾರ್ಪೊರೇಷನ್‌ಗಳನ್ನು ಮಾಡುವುದಾದರೆ ಖಂಡಿತವಾಗಿ ಈ ದೇಶ ಉದ್ಧಾರವಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಎರಡೂವರೆ ವರ್ಷಗಳಿಂದ ಕಾರ್ಪೊರೇಷನ್‌ಗಳ ಸಂಖ್ಯೆ ಜಾಸ್ತಿಯಾಗಿ ಒಬ್ಬರಿಗೂ ಕೆಲಸ ಮಾಡುವುದಕ್ಕೆ ದಿಕ್ಕಿಲ್ಲ. ಎಲ್ಲರೂ ಇದ್ದಾರೆ. ಅಧ್ಯಕ್ಷರು, ಮ್ಯಾನೇಜಿಂಗ್ ಡೈರೆಕ್ಟರು ಪ್ರತಿ ತಿಂಗಳೂ ಸಂಬಳವನ್ನು ತೆಗೆದುಕೊಂಡು ಆ ಬಗ್ಗೆ ಖರ್ಚು ಮಾತ್ರ ಆಗುತ್ತದೆ. ಹಣಕಾಸು ಇಲ್ಲದೆ ಹೋದರೆ ಏಕೆ ಕಾರ್ಪೊರೇಷನ್‌ಗಳನ್ನು ಮಾಡಬೇಕು ? ಕಾರ್ಪೊರೇಷನ್‌ಗಳನ್ನು ಮಾಡಬೇಕು? ಕಾರ್ಪೊರೇಷನ್‌ಗಳನ್ನು ಮಾಡುವ ಉದ್ದೇಶ ಅಧಿಕಾರವನ್ನು ವಿಕೇಂದ್ರೀಕರಣ ಗೊಳಿಸಿ ಹೆಚ್ಚು ಕೆಲಸ ಮಾಡಬೇಕು ಎನ್ನುವ ಉದ್ದೇಶವಿಂದ. ಹಣವಿಲ್ಲ, ದಿನಬೆಳಗಾದರೆ ಮಿತವ್ಯಯ ವೆಂದೂ ಹೇಳುವಾಗ ಈ ರೀತಿ ಕಾರ್ಪೊರೇಷನ್‌ಗಳನ್ನು ಅಧ್ಯಕ್ಷರಿಗೆ ಸಾವಿರ ರೂಪಾಯಿ ಸಂಬಳ ಕೊಟ್ಟು, ಹತ್ತಿಪ್ಪತ್ತು ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಂಡು ತಾಗುತ್ತದೆ. ಮಾನ್ಯ ಹಣಕಾಸಿನ ಸಚಿವರು ಪ್ರೊಡಕ್ಷನ್ ಆಗುವ ಕಡೆಗೆ ಸ್ವಲ್ಪ ದೃಷ್ಟಿಯನ್ನು ಹರಿಸಬೇಕು ಒಬ್ಬ ಎಂಟಿರಿ ಅಧಿಕಾರಿ ಕೆಲಸ ಮಾಡಬೇಕಾದರೆ ಟೆಂಟ್ ಹಾಕಿಕೊಂಡು ಕೆಲಸ ಮಾಡುತ್ತಾನೆ ರಸ್ತೆ ಮಾಡುವುದಕ್ಕೆ ಹುಡುಗರನ್ನು ಕರೆದುಕೊಂಡು ಹೋಗಿ ಕೆಲಸ ಪೂರೈಸಿ ಬರುತ್ತಾರೆ. ನಾಳೆ ಬೇರೆ ಎಲ್ಲೆಯಾದರೂ ಕೆಲಸ ಕೊಟ್ಟರೆ ಅಲ್ಲಿಗೆ ಹೋಗುತ್ತಾರೆ. ಅದಕ್ಕೆ ಬೆಂಗಳೂರಿನಲ್ಲಿ ಒಂದು ಕಚೇರಿ ಬೇಕೋ ? ಯಾರನ್ನೋ ತೃಪ್ತಿಪಡಿಸುವುದಕ್ಕೆ ಕಾರ್ಪೊರೇಷನ್ ಮಾಡುವುದನ್ನು ಕೈಬಿಡಬೇಕೆಂದು ಹೇಳುತ್ತೇನೆ.

ಟಿಬೆಟ್ ಜನಗಳಿಗೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮೂರು ಸಾವಿರ ಎಕರೆ ಪ್ರದೇಶದಲ್ಲಿ ಸುಮಾರು ೮೦೦ ಕುಟುಂಬಗಳಿಗೆ ಪುನರ್ವಸತಿ ಮಾಡತಕ್ಕ ವ್ಯವಸ್ಥೆಗೆ ಕೇಂದ್ರ ಸರ್ಕಾರದವರು ಹಣಕೊಡುತ್ತಾರೆನ್ನುವ ನಿರೀಕ್ಷಣೆಯ ಮೇಲೆ ಹಣವನ್ನು ಖರ್ಚು ಮಾಡುವುದಕ್ಕೆ ಇಟ್ಟಿದ್ದಾರೆ. ನಾನು ಹಣಕಾಸಿನ ಸಚಿವರಿಗೆ ಹಿಂದಿನ ಸಲ ಕಳಕಳಿಯ ಮನವಿ ಮಾಡಿದೆ. ಪುನರ್ವಸತಿ ಕಾರ್ಯಕ್ರಮವನ್ನು ಮಾಡುವಾಗ ಅವರಿಗೆ ಉಪಕಾರ ಮನೆಗೆ ಹೆವ್ಯಾರಿ' ಎನ್ನುವ ನೀತಿಯನ್ನು ಅನುಸರಿಸಬೇಡಿ ನಮ್ಮ ರಾಜ್ಯದಲ್ಲಿ ಮನೆ ಇಲ್ಲದೆ ಇರುವ ಹರಿಜನ ಗಿರಿಜನರು ದಿಕ್ಕಿಲ್ಲದೆ ಇರತಕ್ಕವರಿದ್ದಾರೆ. ಸಂಡೂರಿನಲ್ಲಿ ನಾಯಕರು ಎಂದು ಇದ್ದಾರೆ. ಅವರಿಗೂ ಪುನರ್ವಸತಿ ಯೋಜನೆಯನ್ನು ಮಾಡಬೇಕು. ರಾಜ್ಯದಲ್ಲಿಯಾದರೂ ಒಂದಿಷ್ಟು ಕಡೆ ಇಂಥ ಜನರಿಗೆ ಪುನರ್ವಸತಿ ಕೇಂದ್ರವನ್ನು ಮಾಡಬಹುದು ಮಟ್ಟಿಗೆ ನಮಗೆ ಪ್ರಾಮಾಣಿಕತೆ ಇಲ್ಲ, ಕಳಕಳಿ ಇಲ್ಲವಲ್ಲ ಎಂದು ಕೇಳುತ್ತೇನೆ. ಟಿಬೆಟ್ಟಿನಿಂದ ಬಂದಿರತಕ್ಕ ಜನರಿಗೆ ಮೂರು ಸಾವಿರ ಎಕರೆಯಂತೆ ಒಂದು ಕಡೆ ಸಿಕ್ಕುತ್ತದೆ, ಬುಲ್ ಡೋಜರ್ ಸಿಕ್ಕುತ್ತದೆ, ಮನೆ ಸಿಕ್ಕುತ್ತದೆ, ಟ್ರಾಕ್ಟರ್ ಸಿಕ್ಕುತ್ತದೆ, ಎಲ್ಲ ವ್ಯವಸ್ಥೆಯೂ

ಸಿಕ್ಕುತ್ತದೆ. ಈ ರಾಜ್ಯದಲ್ಲಿ ಹುಟ್ಟಿ, ಬೆಳೆದು ಇಲ್ಲೆಯೇ ಸಾಯುತ್ತಾರೆ. ಈ ನೆಲವನ್ನೇ ನಂಬಿ ಕುಳಿತಿರುವವರು ಈ ಜನರಿಗೆ ಒಂದು ಕಡೆಯಾದರೂ ಇಂಥ ಪುನರ್ವಸತಿ ಯೋಜನೆಯನ್ನು ಮಾಡಿದ್ದರೆ ನಾವು ಇಷ್ಟೊಂದು ಕಳಕಳಿಯನ್ನು ವ್ಯಕ್ತಪಡಿಸುತ್ತಿರಲಿಲ್ಲ ಸಿಕಾರಿಪುರ ತಾಲ್ಲೂಕಿನಲ್ಲಿ ಅನೇಕ ಕಡೆ ಜಮೀನಿದೆ, ಫಲವತ್ತಾದ ಜಮೀನಿದೆ. ಲೆಕ್ಕದಲ್ಲಿ ಅದನ್ನೆಲ್ಲ ಆರಣ್ಯವೆಂದು ಗುರುತಿಸಿಕೊಂಡಿದಾರೆ. ಹರಿಜನ ಮಂತ್ರಿಗಳು ಇದ್ದಾರೆ. ಅವರು ಹರಿಜನ ಗಿರಿಜನರ ಮತ್ತು ಇತರ ದಲಿತ ವರ್ಗಗಳ ಜನರಿಗೆ ಪುನರ್ವಸತಿ ಯೋಜನೆಗಳನ್ನು ಮಾಡಿಕೊಡುವ ಬಗ್ಗೆ ಕೆಲಸ ಮಾಡಬೇಕು. ಸಾವಿರ ಅಥವಾ ಎರಡು ಸಾವಿರ ಎಕರೆ ಯಪ್ಲಾಟುಗಳನ್ನು ಮಾಡಿ ರಾಜ್ಯದಲ್ಲಿರುವ ವನಸಂಪತ್ತಿಗಳಲ್ಲಿರುವ ಹರಿಜನ ಗಿರಿಜನರು ಹಿಂದುಳಿದವರು ಹೋಗಿ ವಾಸ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಹಿಂದೆ ಒಂದು ಸಲ ಶ್ರೀ ದೊಡ್ಡತಿಮ್ಮಯ್ಯನವರು ಮಾತನಾಡುತ್ತ ದೊಡ್ಡ ಕಾಲೊನಿಯನ್ನು ಮಾಡಿ ಹರಿಜನರಿಗೆ ಕೊಟ್ಟರೆ ನಾವೇ ಒಂದು ಊರು ಮಾಡಿ ಕೊಂಡು ಗ್ರಾಮ ಪಂಚಾಯತಿ ಎಲ್ಲವನ್ನೂ ಮಾಡಿಕೊಳ್ಳುತ್ತೇವೆಂದು ಹೇಳಿದ್ದರು. ಟಿಬೆಟನ್ನರಿಗಾಗಿ ಇಂಥ ಒಂದು ಯೋಜನೆಯನ್ನು ಮಾಡುವವರು ರಾಜ್ಯದ ಜನರಿಗಾಗಿ ಪುನರ್ವಸತಿ ಯೋಜನೆಗಳನ್ನು ಮಾಡಿ ಹರಿಜನಗಿರಿಜನರಿಗೆ ಹಾಗೂತೀರ ಬಡತನದಲ್ಲಿ ನರಳುತ್ತಿರುವವರಿಗೆ ಏಕೆ ಸಹಾಯ ಮಾಡಬಾರದು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಂದು ಯೋಜನೆಯನ್ನು ಕಳುಹಿಸಿ ನಮ್ಮ ಜನರೂ ಇದ್ದಾರೆ, ಅವರಿಗೂ ಪುನರ್ವಸತಿ ಯೋಜನೆ ಮಾಡಬೇಕು, ಸ್ವಲ್ಪ ದುಡ್ಡು ಕೊಡಿ ಎಂದು ಏಕೆ ಕೇಳಬಾರದು?

ಶ್ರೀ ಆರ್. ಎಸ್. ಪಾಟೀಲ್.—ಒಂದೆ ಕಡೆ ಸಾವಿರಾರು ಎಕರೆ ಜಮೀನು ಕೊಟ್ಟು ಹರಿಜನ ಗಿರಿಜನರಿಗೆ ಪುನರ್ವಸತಿ ಯೋಜನೆ ಮಾಡಿದರೆ ಅವರಲ್ಲಿ ಪ್ರತ್ಯೇಕತೆಯ ಮನೋಭಾವ ಮುಂದೆ ವರಿಯುವುದಿಲ್ಲವೆ?

ಶ್ರೀ ಕಾಗೋಡು ತಿಮ್ಮಪ್ಪ.—ಟಿಬೆಟ್‌ನಿಂದ ಬಂದಿರುವವರು ಎಲ್ಲ ಕಡೆ ಹೋಗಿ ನಮ್ಮ ಜನರ ಸಂಪರ್ಕವನ್ನು ಪಡೆದು ಬಾಳತಕ್ಕ ಕಲ್ಪನೆಯನ್ನು ಅವರಿಗೂ ಮಾಡಿಕೊಡಬೇಕಾಗಿತ್ತು. ಅವರು ಮಾತ್ರ ಪ್ರತ್ಯೇಕವಾಗಿ ಉಳಿಯಬೇಕೆಂದು ಬಯಸಿದ್ದಲ್ಲವೇ? ಈ ರಾಷ್ಟ್ರದಲ್ಲಿ ಅವರನ್ನು ಟಿಬೆಟನ್ನರಾಗಿ ಉಳಿಸುತ್ತಾರೆಯೇ ? ಅವರೂ ಭಾರತೀಯರಾಗಿ ಉಳಿಯುವುದಾದರೆ ಉಳಿಯಲಿ. ಟಿಬೆಟನ್ನರಾಗಿ ಅವರನ್ನು ಪ್ರತ್ಯೇಕವಾಗಿ ಉಳಿಸಬೇಕಾಗಿಲ್ಲ ಟಿಬೆಟನ್ನರು ಪ್ರತ್ಯೇಕವಾಗಿ ಉಳಿಯಲಿ ಎನ್ನುವ ಏಕಾಲ ಮನೋಭಾವವನ್ನು ತೋರಿಸುವುದಾದರೆ ಹರಿಜನ ಗಿರಿಜನರು ಪ್ರತ್ಯೇಕವಾಗಿ ಉಳಿಯುವುದರಿಂದ ಏನು ತೊಂದರೆ ಇದೆ ? ಹರಿಜನ ಮುಖಂಡರಿಗೆ ಮತ್ತು ಹರಿಜನ ಮಂತ್ರಿಗಳಿಗೆ ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ, ನಿಮ್ಮ ಜನರ ಬಗ್ಗೆ ಕಳಕಳಿ ಇರುವುದಾದರೆ ಸರ್ಕಾರದ ಮೇಲೆ ಒತ್ತಾಯವನ್ನು ತಂದು ಇದೇ ರೀತಿ ಪುನರ್ವಸತಿ ಯೋಜನೆಯನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡಿ. ಇಲ್ಲದೆ ಹೋದರೆ ಹೋದರೆ ಇರತಕ್ಕ ಅವಕಾಶ ಗಳನ್ನು ಉಪಯೋಗಿಸಿಕೊಳ್ಳದೆ ನಿಮ್ಮ ಕಾಲವನ್ನು ತೇರಿಸಿಕೊಂಡುಬಾವಸಿಯು ಹೋಗತಕ್ಕ ಸಮುದಾಯಕ್ಕೆ ಹಿತವಾಗುತ್ತದೆ ಎಂದು ನಾನು ಹೇಳುತ್ತೇನೆ. ಸರ್ಕಾರದವತು ಈ ವಿಚಾರದ ಬಗ್ಗೆ ತೀವ್ರವಾಗಿ ಆಲೋಚನೆ ಮಾಡುತ್ತಾರೆಂದು ನಂಬಿದ್ದೇನೆ.

ಕೈಗಾರಿಕಾ ಇಲಾಖೆ ಬಗ್ಗೆ ಹೇಳುವುದಾದರೆ, ರೆಂಕೋ ಕಾರ್ಖಾನೆಗೆ ಹಣವನ್ನು ಕೊಟ್ಟಿದ್ದಾರೆ. ಸಾರ್ವಜನಿಕ ಉದ್ಯಮ ಸಮಿತಿಯವರು ಒಂದು ವರದಿಯನ್ನು ಸರ್ಕಾರಕ್ಕೆ ಈ ಗಾಗಲೇ ಕೊಟ್ಟಿದ್ದಾರೆ. ಪ್ರತಿ ತಿಂಗಳೂ ಕೂಡ ಕಾರ್ಖಾನೆ ಲುಕ್ಸಾನಿನಲ್ಲಿ ನಡೆಯುತ್ತಿದೆ. ಒಂದಂತಿಂಗಳಿಗೆ ೧೦ ಲಕ್ಷ ರೂಪಾಯಿ ನಷ್ಟು ಲುಕ್ಸಾನಿನಲ್ಲಿ ನಡೆಯುತ್ತಿದೆ, ವರ್ಕಿಂಗ್ ಕ್ಯಾಪಿಟಲ್ ಇಲ್ಲ ಎನ್ನುವ ಕಾರಣಕ್ಕಾಗಿ ಲುಕ್ಸಾನಿನಲ್ಲಿ ನಡೆಯುತ್ತಿದೆ. ಈ ಹೊತ್ತು ಏನು ಹಣವನ್ನು ಅವರಿಗೆ ಏನೂ ಕೊಟ್ಟಿದ್ದೀರಿ ಅದನ್ನು ಒಂದು ವರ್ಷಕ್ಕೆ ಮುಂಚೆ ಕೊಟ್ಟಿದ್ದರೆ. ಒಂದು ವರ್ಷದಿಂದ ಲುಕ್ಸಾನಿನಿರುವ ೧೨೦ಲಕ್ಷ ರೂಪಾಯಿಉಳಿತಾಯವಾಗುತ್ತಿತ್ತು

ನೀವು ಈ ಹಣವನ್ನು ಮುಂಚಿತವಾಗಿ ಕೊಟ್ಟಿದ್ದರೆ ಚೆನ್ನಾಗಿತ್ತು. ಅವರು ಬಹಳ ದಿವಸಗಳಿಂದ ನಮಗೆ ವರ್ಕಿಂಗ್ ಕ್ಯಾಪಿಟಲ್ ಇಲ್ಲ ಅದಕ್ಕೋಸ್ಕರ ದುಡ್ಡು ಕೊಡಿ ಎಂದು ರೆಂಕೋ ಅವರು ಕೇಳುತ್ತಿದ್ದರು. ನೀವು ನಿಧಾನವಾಗಿ ಕೊಟ್ಟದ್ದರಿಂದ ಪ್ರತಿ ತಿಂಗಳು ಅವರಿಗೆ ೧೦ ರಿಂದ ೧೨ ಲಕ್ಷ ರೂಪಾಯಿ ಲುಕ್ಸಾನು ಆಗುತ್ತಿದೆ. ಒಂದು ವರ್ಷ ಮುಂಚೆ ಕೊಟ್ಟಿದ್ದರೆ ಒಂದು ಒಂದೂವರೆ ಕೋಟಿ ರೂಪಾಯಿ ಉಳಿತಾಯವಾಗುತ್ತಿತ್ತು. ನೀವು ಕೊಟ್ಟ ದುಡ್ಡನ್ನು ಲುಕ್ಸಾನಿಗೆ ಸೇರಿಸಿಕೊಂಡಿದ್ದಾರೆ ಅಷ್ಟೆ. ನೀವು ದುಡ್ಡನ್ನು ಕೊಟ್ಟ ಮೇಲೆ ರೆಂಕೋನಲ್ಲಿ ಸ್ವಲ್ಪ ಕೆಲಸಗಳು ಪ್ರಾರಂಭವಾಗಿವೆ. ತಡವಾಗಿ ಹಣ ಕೊಟ್ಟರೆ ನೀವು ಕೊಟ್ಟದ್ದು ಸಾರ್ಥಕವಾಗುವುದಿಲ್ಲ ಮೊದಲಾ ಲುಕ್ಸಾನು ಆಗುವುದನ್ನು ತಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರದಲ್ಲಿ ನೀವು ಹಣವನ್ನು ಕೊಟ್ಟಿದ್ದರೆ ಆದ ಲುಕ್ಸಾನನ್ನು ತಪ್ಪಿಸಬಹುದಾಗಿತ್ತು. ಉದ್ಯಮ ಸಮಿತಿಯವರು ಕೊಟ್ಟ ವರದಿಯಲ್ಲಿ ಇದನ್ನು ಹೇಳಿದ್ದಾರೆ. ಉದ್ಯಮ ಸಮಿತಿ

(ಶ್ರೀ ಕಾಗೋಡು ತಿಮ್ಮಪ್ಪ)

ಯವರ ಳನೇ ವರದಿಯಲ್ಲಿ ಸರ್ಕಾರಕ್ಕೆ ಒಂದು ಕಿವಿ ಮಾತನ್ನು ಹೇಳಿದ್ದಾರೆ. ರೆಂಕೋನಲ್ಲಿ ಜಾಹಿರಾತಿಗೆ ಎಷ್ಟು ಖರ್ಚುಮಾಡಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಆದರಲ್ಲಿ

"The Company depends mostly on Government Department Government Departmental Undertakings for the sale of major items of production like energy meters, cables, water meters etc, for which much exdenditure on publicity is not required. The turnoves of the other items during 1971–72 was less than Rs. 40 lakhs. To achieve this volume of sale, the company has spent Rs. 10–14 lakhs towards advertisement. Out of this amount, a sum of Rs 9 0 lakhs was spent towards advertisement on radios and amplifiers. It was stated that the company had embared on this extensive advertising campaign in view of their proposed expansion of manufacture of radsis and electronic goods. However, the Government have accepted the view of the Committee that the expenditure on advertisement was disproportionately high." ಎಂದು ಹೇಳಿದ್ದಾರೆ.

ಖರ್ಚಾಗಿರತಕ್ಕಂಥಾದ್ದು ೧೦–೧೪ ಲಕ್ಷ ರೂಪಾಯಿ ಆದರೆ ಅಡ್ವರ್ಟೈಸ್ ಮೆಂಟ್, ಗೋಸ್ಕರ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಸ್ವಂತ ವ್ಯವಹಾರಕ್ಕೆ ಕಂಪೆನಿ ನಡೆಸುತ್ತಿದ್ದಾರಾ ಎನ್ನುವುದನ್ನು ಆಲೋಚನೆಮಾಡಿ ಸ್ವಾಮಿ ? ನಂತರ ಆದರಲ್ಲಿ

"The Government have further informed that they were aware of the problems faced by the company and that the company would sustain loss to the extent of Rs. 0 lakhs every month if adequate working capital was not made available immediately. If that were so the Committee feel that the decisionto provide the requisite working capital should have been taken immediately as it meant that a delay of each month would result in a loss of Rs. 0 lakhs. For various reasons stated by them Government took precious 12 months to provide Rs. 100 lakhs and in the bargain lost Rs. 120 lakhs. The Committee are dissatisfied with the reasoning given for the delay and the consequent loss of Rs. 120 lakhs." ಎಂದು ಹೇಳಿದ್ದಾರೆ.

ಇದರ ಬಗ್ಗೆ ತಮಗೆ ಏನೂ ಹೊಳೆಯಲಿಲ್ಲವೇ ? ಅನಾವಶ್ಯಕವಾಗಿ ದುಂದು ವೆಚ್ಚ ಆಗುತ್ತಾ ಇರುವುದನ್ನು ಕಡಿಮೆಮಾಡಬೇಕು ಎನ್ನುವ ಪ್ರಜ್ಞೆ, ಬುದ್ಧಿವಂತಿಕೆ ಸರ್ಕಾರಕ್ಕೆ ಇಲ್ಲವೇಹೋದರೆ, ತಾವು ಕೊಟ್ಟಿರುವ ಹಣಯಾತಕ್ಕೆ ? ಅಧಿಕಾರ ಹಾಗಾದರೆ, ನಾವೆಲ್ಲಾ ಒಂದು ಕಂಪೆನಿ ಮಾಡಿಕೊಳ್ಳುವುದೂ ಒಳ್ಳೆಯದೂ : ಒಂದು ವರ್ಷದಲ್ಲಿ ರೆಂಕೋ ಕಂಪೆನಿ ೯ ಲಕ್ಷ ರೂಪಾಯಿ ಅಡ್ವರ್ಟೈಸ್‌ಮೆಂಟ್‌ಗೆ ಕೊಟ್ಟಿರಬೇಕಾದರೆ, ನಾವು ಏಕೆ ಒಂದು ಕಂಪೆನಿ ಮಾಡಿಕೊಳ್ಳಬಾರದು. ಈ ರಂಕೊ ಕಂಪನಿಗೆ ಅಡ್ವರ್ಟೈಸ್ ಮೆಂಟ್ ಏಕೆ ಬೇಕು ? ೪ ಲಕ್ಷ ರೂಪಾಯಿ ವ್ಯವಹಾರ ಮಾಡಿದ್ದಾರೆ. ೯ ಲಕ್ಷ ರೂಪಾಯಿ ಅಡ್ವರ್ಟೈಸ್‌ಮೆಂಟ್‌ಗೆ ಏಕೆ ಕೊಡಬೇಕು ? ಇದು ಒಂದೇ ಕಾರಣ ಸಾಕು. ಇಂತಹ ವ್ಯವಹಾರಗಳು ಅನೇಕ ದಿನದಿಂದಲೂ ನಡೆಯುತ್ತಿವೆ. ರೆಂಕೋ ಕಂಪೆನಿಯಲ್ಲಿ ಸಣ್ಣಸಣ್ಣ ಸಾಮಾನುಗಳನ್ನು ಹೊರಗಡೆಯಿಂದ ತರಿಸುತ್ತಿರಬೇಕು ಅನೇಕ ಜನ ನಮ್ಮ ಸ್ನೇಹಿತರು ಇದ್ದಾರೆ, ಅವರು, ಕಂಪೆನಿಯವರು ಸ್ಕ್ರೀನ್ ಪ್ರಿಂಟಿಂಗ್ ಮಾಡಿಸುತ್ತಾರೆ, ೨ ತಿಂಗಳು, ೩ ತಿಂಗಳಾದರೂ ದುಡ್ಡು ಕೊಡುವುದಿಲ್ಲ, ಆ ಕಂಪೆನಿಯ ಸಹವಾಸಬೇಕು ಎಂದು ಹೇಳುತ್ತಾರೆ. ದಯವಿಟ್ಟು ಇವನ್ನೆಲ್ಲಾ ನೋಡಿ ಸರ್ಕಾರದ ಹಣ, ಸಾರ್ವಜನಿಕರ ಹಣ ಇದನ್ನು ಮಿತವ್ಯಯ ಮಾಡಿದ್ದರೆ ೧೦ ಲಕ್ಷ ಉಳಿತಾಯವಾಗುತ್ತಿತ್ತು. ಒಂದು ಕೆರೆ ಕಟ್ಟಿಬೇಕಾದರೆ, ಹಣ ಇಲ್ಲ, ಶಾಲೆ ಕಟ್ಟಡ ರಿಪೇರಿ ಮಾಡಬೇಕಾದರೆ ಹಣ ಇಲ್ಲ ಔಷಧಿ ಕೊಡುವುದಕ್ಕೆ ಹಣ ಇಲ್ಲ. ಕಳೆದ ಎರಡೂವರೆ ವರ್ಷದಿಂದ ಎಷ್ಟು ಹಳ್ಳಿ ಪ್ರದೇಶಗಳಲ್ಲಿ ಸಣ್ಣ ಪುಟ್ಟ ಸೇತುವೆಗಳನ್ನು ಕಟ್ಟಿಸಿ

ದ್ದೀರಿ, ಕಟ್ಟಿಸಿಲ್ಲಿ, ಏಕೆ ಹಣ ಇಲ್ಲ. ಹಾಸನಾಂಬೆಯ ಸಚಿವರು ಆನೇಕ ಪಿ. ಡಬ್ಲ್ಯು. ಡಿ. ಇಲಾಖೆಯ ಡಿವಿಜನ್‌ಗಳನ್ನು ಮುಚ್ಚಿದ್ದಾರೆ. ಹಣಕಾಸಿನ ಪರಿಸ್ಥಿತಿಯಿಂದ ಅನೇಕ ಸಿಬ್ಬಂದಿ ವರ್ಗವನ್ನು ಬಿಡುಗಡೆ ಮಾಡಬೆಕಾಗಿತ್ತು. ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಗ್ರೇಡಿನವರನ್ನು ಪಿ. ಎ. ಆಗಿ ನೇಮಕಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ :—ಅಸಿಸ್ಟೆಂಟ್ ಇಂಜಿನಿಯರನ್ನು ಎಕ್ಸಿಕ್ಯೂಟೀವ್ ಇಂಜಿನಿಯರ್ ಮಾಡಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಯ್ಯ :—ಗಂಜಿ ಕುಡಿಯುವವನಿಗೆ ಮೀಸೆ ತೀಡುವವನು ಒಬ.

ಶ್ರೀ ಕಾಗೋಡು ತಿಮ್ಮಪ್ಪ :—ಅಸಿಸ್ಟೆಂಟ್ ಇಂಜಿನಿಯರ್ ಪಿ. ಎ. ಆಗಿರಬೇಕು ಎಂದರೆ ಏನರ್ಥ ? ಸಂಬಳ ಕೊಡುವುದಕ್ಕೆ ಹಣ ನಮ್ಮ ಹತ್ತಿರ ಏಲ್ಲ ಬೇರೆ ಕಡೆಗೆ ಹೋಗಿ ಎಂದು ಹೇಳಬೇಕಾಗಿತ್ತು. ಅವನು ನನಗೆ ಪ್ರಮೋಷನ್ ಸಿಕ್ಕಲಿಲ್ಲ, ಪಿ. ಎ ಆಗಿ ಕೆಲಸಮಾಡಬೇಕು ಎಂದು ಅಳುತ್ತಾನೆ. ಅವರು ರಜೆ ಹಾಕಿ ಇಲ್ಲಿ ಓಡಾಡುತ್ತಾರೆ. ಆದುದರಿಂದ ನಾವು ಅವನನ್ನು ಆಯ್ಕೆ ಮಾಡುವುದು ಸರಿಯೇ ?

ಇನ್ನು ವರ್ಗಾವಣೆಯನ್ನು ಕೂಡ ಮಾಡಕೂಡದೆಂದು ಒಂದು ಆರ್ಡರ್ ಮಾಡಿದ್ದರೂ ಕೂಡ ಇವತ್ತು ಅನಿವಾರ್ಯಕವಾಗಿ ವರ್ಗಾವಣೆ ಮಾಡುತ್ತಿದ್ದೀರಿ. ಇವತ್ತು ಎಂಥವರನ್ನು ವರ್ಗಾವಣೆ ಮಾಡಬೇಕು ಎಂದರೆ ರಿಜೈರ್ಡ್ ಆಗುವಂಥವರನ್ನು, ಇಲ್ಲ ಯಾರ ವೇಲಾದರೂ ಬಲವಾದ ಆಪಾದನೆ ಇದ್ದರೂ ಕೂಡ ಅಂಥವರನ್ನು ವರ್ಗಾವಣೆ ಮಾಡದೇ ಬೇರೆಯವರನ್ನೂ ವರ್ಗಾವಣೆ ಮಾಡಿದ್ದಾರೆ ಅದಕ್ಕೋಸ್ಕರ ಇವತ್ತು ವರ್ಗಾವಣೆ ಮಾಡಕ್ಕೆ ವಿಚಾರದಲ್ಲಿ ಹೇಳುವುದಾದರೆ ಎಗ್ಸಿಕ್ಯೂಟಿವ್ ಇಂಜಿನಿಯರ್ ಮುಂತಾದವುಗಳು ನಮಗೆ ಟಿ ಎ. ಡಿ.ಎ. ಇಲ್ಲದಿದ್ದರೂ ಪರವಾಗಿಲ್ಲವೆಂದು ನಿಮಗೆ ಯಾರಿಗಾದರೂ ಟಿ.ಎ.ಡಿ.ಎ. ಕೊಟ್ಟು ಒಳ್ಳೆಯ ಜಾಗಕ್ಕೆ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದಾರೆ.

ಇನ್ನು ಕೆಲವು ವಿಷಯಗಳು ತಮಗೇ ಗೊತ್ತಿರಬಹುದು. ಮೆಜಿಸ್ಟಿಕ್ ಸರ್ಕಲ್‌ನಲ್ಲಿ ಈಗಾಗಲೇ ೧೦ ಥಿಯೇಟರ್‌ಗಳು ಜಾಸ್ತಿಯಾಗಿವೆ. ಇದುಂದ ಜನರಿಗೂ ತೊಂದರೆಯಾಗುತ್ತಿದೆಯೆಂದು ಹಿಂದೆ ನಾವು ಹೇಳಿದಾಗ, ಸರ್ಕಾರದವರಿಗೆ ಕೊಡುವುದಕ್ಕೆ ಅವಕಾಶವಿದೆ, ಕಾನೂನು ಪ್ರಕಾರ ಕೊಡಬಹುದು ತೊಂದರೆ ಏನೂ ಇಲ್ಲವೆಂದು ಹೇಳಿದ್ದರು. ಆವೇ ಶ್ರೀಮತಿ ಇಂದಿರಾಗಾಂಧಿಯವರು ಇಲ್ಲಿಗೆ ಬಂದು ಇನ್ನು ಸಿನಿಮಾ ಥಿಯೇಟರ್ಸ್‌ಗಳನ್ನು ಕಟ್ಟಿಸುವುದು ಸಾಕು ಎಂದು ಹೇಳಿದಾಗ ಇವರು ಪ್ಲೇಟನ್ನು ತಿರುಗಿ ಹಾಕಿ ಹೇಳುವುದಕ್ಕೆ ಶುರು ಮಾಡಿದ್ದಾರೆ. ಅದು ಹೋಗಲಿ ಇವತ್ತು ನೀವು ವರ್ಗಾವಣೆ ಮಾಡತಕ್ಕಂಥವರಲ್ಲಿ ಒಂದು ನೀತಿ ನಿಲುವು ಇರಬೇಕು. ಅದು ಇಲ್ಲದೇ ಹೋದರೆ ಯಾರೋ ಬುದ್ಧಿವಾಣಿಯಾಗುವವರು ಬುದ್ಧಿವಾಣಿಯಾಗುತ್ತಾರೆ ಆದುದರಿಂದ ನೀವು ಮಾಡಬೇಕಾದ ಕೆಲಸವನ್ನು ಸರಿಯಾಗಿ ಮಾತಿಲ್ಲವೆಂದು ಅಧ್ಯಕ್ಷರ ಮುಖಾಂತರ ಹೇಳುತ್ತೇನೆ. ಅಧ್ಯಕ್ಷರೆ ತಮ್ಮ ಮುಖಾಂತರ ಮುಖ್ಯಮಂತ್ರಿಗಳನ್ನು ನಾನು ಕೇಳಬಯಸುವುದೇನೆಂದರೆ, ಇವತ್ತು ನೀವು ಬಡವರ ಬಗ್ಗೆ, ಹಿಂದ ಳಿದವರಿಗೆ ವಿದ್ಯಾರ್ಥಿ ನಿಲಯ ಕಟ್ಟಿಸುವ ಬಗ್ಗೆ ಒಳ್ಳೆಯ ಕೆಲಸವನ್ನೇನಾದರೂ ಮಾಡುತ್ತಿದ್ದಾರೆಯೇ ಎಂದರೆ ಇಲ್ಲ. ಇವತ್ತು ಉತ್ಪಾದನಾ ರಹಿತ ಕ್ಷೇತ್ರದಲ್ಲಿ ಹಣ ವಿಚ್ಚಾಗುತ್ತಿದೆ, ಆದೇ ಹಣವನ್ನು ಹಿಂದುಳಿದ ಜನಾಂಗಕ್ಕೆ ಒಂದೊಂದು ಜಿಲ್ಲೆಗೆ ಒಂದೊಂದು ಹಾಸ್ಟೆಲ್ ಕಟ್ಟಿಸಿದ್ದರೆ ಸಹಾಯಕವಾಗುತ್ತಿತ್ತು. ಅದು ಏನೂ ಈ ಸಪ್ಲಿಮೆಂಟರಿ ಬಡೆಟ್‌ನಲ್ಲಿ ಇಲ್ಲ.

ಶ್ರೀ ಎಂ ವೈ. ಘೋರ್ಪಡೆ :—ಮಂಡ್ಯದ ನಡೆದ ಹಿಂದುಳಿದ ಸಮ್ಮೇಳನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರತಿಯೊಂದು ಹೆಡ ಕ್ವಾರ್ಟರ್ಸ್‌ನಲ್ಲಿಯೂ ಎಲ್ಲೆಲ್ಲಿ ಹಾಸ್ಟಲ್‌ಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಿದೆಯೋ ಅಲ್ಲಲ್ಲಿ ಕಟ್ಟಿಸುತ್ತೇವೆಂದು ಹೇಳಿದ್ದಾರೆ. ಆದರೆ ಈಗ ತಕ್ಷಣವೇ ಅದಕ್ಕೆ ಹಣಬೇಕೆಂದು ಈ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಕೇಳಬೇಕಾದುದು ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಇವತ್ತು ನೀವು ಬರೀ ಭಾಷಣಗಳನ್ನು ಮಾಡುವುದಕ್ಕಿಂತ ವಲ್ಡ್ ಬಲ್ ಸೆಕ್ಷನ್ ಉದ್ದಾರವಾಗಲು ಸಹಾಯಕವಾಗತಕ್ಕಂಥ ಕೆಲಸಗಳನ್ನು ಮಾತಿದರೆ ನಾವು ಮೆಚ್ಚುತ್ತೇವೆ. ಆ ರೀತಿ ಮಾಡದೆ ಈ ಹಣವನ್ನು ಅಪವ್ಯಯದಲ್ಲಿ ತೊಡಗಿಸಿರುವುದರಿಂದ ಈ ಬೇಡಿಕೆಯನ್ನು ವಿರೋಧಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ವಾಪಸು ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೆ ರೇಗೌಡ :—(ವೇಮಗಲ್) ಸನ್ಮಾನ್ಯ ಅಧ್ಯಕ್ಷರೇ ಈ ದಿನ ಮಾನ್ಯ ಅರ್ಥ ಮಂತ್ರಿಗಳು ಕೆಲವು ಬಾಬತ್‌ಗಳಲ್ಲಿ ಹೆಚ್ಚುವರಿ ಬೇಡಿಕೆಯ ಬಗ್ಗೆ ಈ ಸಭೆಯ ಮುಂದೆ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಅವನ್ನು ನಾನು ಗತ್ಯಂತರವಿಲ್ಲದೆ ವಿರೋಧ ಮಾಡಲೇಬೇಕಾಗಿದೆ.

(ಶ್ರೀ ಪಿ. ಬೈರೇಗೌಡ)

ಪಿ. ಡಬ್ಲ್ಯೂ. ಡಿ ಗೆ ಸುಮಾರು ೧೮,೪೦ ಲಕ್ಷ, ೦೦ ರೂ ಗಳಷ್ಟು ಹಣವನ್ನು ಇಲ್ಲಿ ಇಟ್ಟಿದ್ದಾರೆ. ಇಷ್ಟು ಕೊಟ್ಟಾಂತರ ರೂಪಾಯಿಗಳಷ್ಟು ಹಣವನು ಕೊಡುವುದಕ್ಕೆ ಹೊರಟಿದ್ದಾರೆ. ಪಿ. ಡಬ್ಲ್ಯೂ. ಡಿ. ಶಾಖೆಯ ಮಂತ್ರಿಗಳು ಇದೇ ಸಂದರ್ಭದಲ್ಲಿ ಇಲ್ಲಿ ಕಾನೂನು ಬದ್ಧವಾಗಿ, ಕ್ರಮ ಬದ್ಧವಾಗಿ, ನಿಯಮ ಬದ್ಧವಾಗಿ ಕಾಂಪ್ರಹೆನ್ಸಿವ್ ರೂರಲ್ ಪ್ರೊಗ್ರಾಮ್ ನಂತೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ೫೦ ಮೈಲಿ ಗಳ ರಸ್ತೆಗಳನ್ನು ೩ ವರ್ಷದಲ್ಲಿ ಮಾಡಿ ಮುಗಿಸುತ್ತೇವೆಂದು ಹೇಳಿದ್ದಾರೆ. ಅಧ್ಯಕ್ಷರೇ ನಾನು ಕೆಲವು ತಾಲ್ಲೂಕ್‌ಗಳಲ್ಲಿ ಓಡಾಡಿ ಬಂದಿದ್ದೇನೆ. ಆವರು ಈ ಮಾತನ್ನು ಹೇಳಿ ಎರಡು ವರ್ಷವಾಯಿತು ಇನ್ನು ಒಂದೇವರ್ಷ ಬಾಕಿ ಇದೆ, ಆವರು ಹೇಳಿದರಲ್ಲಿ ಅರ್ಧ ಹೋಗಲಿ, ೫ ಮೈಲಿಗಳಷ್ಟು ಇದುವರೆಗೆ ರಸ್ತೆ ಯಾಗಿಲ್ಲ. ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ೫೮ ಮೈಲಿ ರಸ್ತೆಲ್ಲ ಕೇವಲ ೫ ಮೈಲಿಯಷ್ಟು ಕೂಡ ರಸ್ತೆಗಳು ಆಗಿಲ್ಲ. ಎಗ್ಜಿಕ್ಯೂಟಿವ್ ಎಂಜಿನಿಯರ್‌ರವರನ್ನು ನಾವು ಹೋಗಿ ವಿಕ್ಕೆ ಇನ್ನೂ ರಸ್ತೆ ಮಾಡಿಸಿಲ್ಲವೆಂದು ಕೇಳಿದರು, ಅವರು ನಮಗೆ ಸರ್ಕಾರದಿಂದ ಒಂದು ನಯಾಪೈಸೆ ಕೂಡ ಖರ್ಚು ಮಾಡ ಕೂಡದೆಂದು ಆಜ್ಞೆ ಬಂದಿದೆ ಎಂದು ಆ ಆಜ್ಞೆಯನ್ನು ತೋರಿಸುತ್ತಾರೆ ಇವತ್ತು ವರ್ಷೇ ವರ್ಷೇ ರೇಟ್ಸ್ ಗಳು ೧೦ ರಷ್ಟು ೨೦ ರಷ್ಟು ರಿವೈಜ್ ಆಗುತ್ತಿದೆ ಇವತ್ತು ೫೦ ರೂಪಾಯಿನಲ್ಲಿ ಆಗತಕ್ಕಂಥದ್ದು ಬರೋ ವರ್ಷ ೬೦—೭೦ ರೂಪಾಯಿ ಆಗುತ್ತದೆ ಇದರಲ್ಲಿ ಎಲ್ಲಿ ಇದೆ ಮಿತವ್ಯಯ ? ಇವತ್ತು ರಸ್ತೆಗಳನ್ನು ಮಾಡಿಸಬೇಕೆಂದರೆ ಮಿತವ್ಯಯ, ಕೆರೆಕಟ್ಟೆಗಳನ್ನು ಕಟ್ಟಿಸಬೇಕೆಂದರೆ ಮಿತವ್ಯಯ ಮಾನ್ಯ ಕಾಗೋಡು ತಿಮ್ಮಪ್ಪನವರು Remco ಬಗ್ಗೆ ಈಗಾಗಲೇ ಹೇಳಿದ್ದಾರೆ ಪುನಃ ನಾನು ಅದರ ಬಗ್ಗೆ ಹೇಳಬೇಕಾದ ಅವಶ್ಯ ಕತೆ ಇಲ್ಲ ನನ್ನ ತಾಲ್ಲೂಕಿನಲ್ಲಿ ಒಂದು ಮಣಿಕಟ್ ಕೆರೆಗೆ ಸುಮಾರು ೩—೪ ವರ್ಷಗಳ ಕೆಳಗೆ ೩ ಲಕ್ಷದ ೮೦ ಸಾವಿರ ರೂಪಾಯಿಗಳು ಎಸ್ಟಿಮೇಟ್ ಆಗಿತ್ತು, ಇವತ್ತು ಅದೇ ಕೆಲಸಕ್ಕೆ ೭ ಲಕ್ಷದ ೮೦ ಸಾವಿರ ರೂಪಾಯಿಗಳು ಆಗುತ್ತದೆ, ಇದು ಸರ್ಕಾರದವರು ಮಾಡತಕ್ಕ ಮಿತವ್ಯಯವೇ ? ಮಾನ್ಯ ಆರ್ಥ ಮಂತ್ರಿಗಳು ದಯವಿಟ್ಟು ಇದಕ್ಕೆ ಸಮರ್ಥನೀಯವಾದ ಉತ್ತರವನ್ನು ಹೇಳುತ್ತಾರೆಯೇ ಸ್ವಾಮಿ ? ಇದು ಯಾವ ಪರಿಸ್ಥಿತಿಯಲ್ಲಿದೆ ಎಂದರೆ ಇವತ್ತಿನ ದಿವಸ ನಾವು ಈಗ ತಾನೆ ಕೃಷ್ಣಾ ನದಿ ನೀರಿನ ಹಂಚಿಕೆಯ ವಿಷಯದ ಬಗ್ಗೆ ಚರ್ಚೆಮಾಡಿದ್ದೇವೆ ಅದೇ ರೀತಿಯಲ್ಲಿ ಇದು ಕೂಡ ೧೯೭೪ ನೇ ಇಸ್ವಿಯಲ್ಲಿ ಮದ್ರಾಸ್ ಸರ್ಕಾರಕ್ಕೂ, ಮೈಸೂರು ಸರ್ಕಾರಕ್ಕೂ ಒಂದು ಅಗ್ರಿಮೆಂಟ್ ಆಗಿತ್ತು. ಈ ಕೆರೆಯಿಂದ ಸುಮಾರು ೨ ನೂರು ಎಕರೆಗೆ ನೀರು ಸರಬರಾಜು ಮಾಡಬಹುದೆಂದು ಇಂಜಿನಿಯರ್‌ಗಳು ಅಂದಾಜು ಮಾಡಿದ್ದರೂ ಇವತ್ತಿನವರೆಗೂ ಆ ಕೆರೆ ಆಗಿಲ್ಲ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಕಾಗದ ಬರೆದಿದ್ದು ಆಯಿತು, ಮತ್ತೆ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಿಗೂ ನಮಸ್ಕಾರ ಮಾಡಿ ಈ ಕೆರೆಯನ್ನು ಕಟ್ಟಿಸಿ ಎಂದು ಹೇಳಿದು ಆಯಿತು. ಇದುವರೆಗೂ ಯಾರು ಈ ಕೆರೆಯನ್ನು ಕಟ್ಟಿಸಲಿಲ್ಲ. ಈಗ ಇದರಿಂದ ಏನಾಗಿದೆ ಏಂದರೆ ೩ ಲಕ್ಷದ ಚಿಲ್ಲರೆಯಲ್ಲಿ ಕೆಲಸ ಆಗುವಂಥಾದ್ದು ೭ ಲಕ್ಷದ ಚಿಲ್ಲರೆ ಆಗುತ್ತದೆ. ವಿರೋಧ ಪಕ್ಷದ ಸದಸ್ಯರು ಆ ಜಾಗದಿಂದ ಗದ್ದು ಬಂದಿದ್ದಾರೆ ಅಲ್ಲಿ ಕೆರೆಯನ್ನು ಕಟ್ಟಿಸಬಾರದೆಂಬುದನ್ನು ಮನಸ್ಸಿನಲ್ಲಿಟ್ಟು ಕೊಂಡು ಈ ರೀತಿ ಮಾಡುತ್ತಿದ್ದಾರೋ ಹೇಗೋ ನಮಗೆ ತಿಳಿಯಬಿಲ್ಲ. ಇದು ಬಹಳ ಅತ್ಯಾವಶ್ಯಕವಾಗಿ ಆಗಬೇಕಾಗಿತ್ತು. ಇವತ್ತು ಅಲ್ಲಿ ನೀರು ಪೋಲು ಆಗುತ್ತಿದೆ, ಎಲ್ಲಿದೆ ನಿನ್ನು ಎಕಾನಮಿ ಎಂದು ಕೇಳುತ್ತೇನೆ. ಆ ಮೇಲೆ ಇದೇ ರೀತಿಯಲ್ಲಿ ಕೋ-ಆಪರೇಷನ್ ವಿಷಯ ತೆಗೆದುಕೊಂಡರೆ ೩ ಗಂಟೆ ಯಲ್ಲಿ ೩೦ ದಿವಸ ಹೇಳಿದರೂ ಸಾಕಾಗುವುದಿಲ್ಲ. ಇವತ್ತು ಪ್ರತಿ ಜಿಲ್ಲೆಯಲ್ಲೂ ಕೂಡ ಕೆಲವು ಮಾರ್ಕೆಟಿಂಗ್ ಸೊಸೈಟಿಗಳು ಗೆಲವು ಇವೆ.

MADAM SPEAKER—The discussion on Supplementing demands will continue tomorrow and after that we will take up discussion on Budget of the Electricity Board.

The House stands adjourned to meet tomorrow at 8-30 A, M.

The House Adjourned at Thirty Minutes Past one of the clock to Mee again at thirty minutes past Eight of the clock on Friday the 23rd March 1974.

WD 1249—GPB— 550—12-12-1974